ರಾಯಚೂರು, ಕೊಪ್ಪಳ, ಯಾದಗಿರಿ, ಕಲಬುರ್ಗಿ, ಬಳ್ಳಾರಿ, ವಿಜಯನಗರ, ಬೀದರ, ಏಕಕಾಲಕ್ಕೆ ಪ್ರಕಟಣೆ
Raichur, Koppal, Yadagiri, Kalburgi, Ballary, Vijaya Nagar, Bidar

# ಕನ್ನಡ ಮಾತೃ ಭೂಮಿ

ಕನ್ನಡದಿನ ಪತ್ರಿಕೆ

ರಾಯಚೂರಿನಿಂದ ರಾಜ್ಯದವರೆಗೆ

ಸಂಪಾಕದರು : ಶ್ಯಾಮ್ ಸುಂದರ್.ಎಲ್
EDITOR : SHYAM SUNDER L


KANNADA MATHRUBHOOMI
KANNADA DAILY PAPER

mathrubhoomircr@gmail.com
Call : 9886635117

ಸಂಪುಟ : Volume : 03 | ಸಂಚಿಕೆ Issuse : 157 | ದಿನಾಂಕ : 07-04-2026 Date : 07-04-2026 | ಮಂಗಳವಾರ Tuesday | RNI: Karkan/2023/89199 Post Reg No.: RCR/L/RNP/98/2025-2027 | ರಾಯಚೂರು Raichur | ಪುಟ : Pages : 04 | ರೂ Rs. 2

## ಮಂಡ್ಯ: ಮಾಜಿ ಶಾಸಕ ಡಾ. ಅನ್ನದಾನಿ ಜೊತೆಗೆ ಪತ್ನಿಯ ಅಕ್ರಮ ಸಂಬಂಧ ಆರೋಪ, ಕುಮಾರಸ್ವಾಮಿ ಕಾಲಿಗೆ ಬಿದ್ದು ಪತಿಯ ಗೋಳಾಟ!


**ಮಂಡ್ಯ,ಏ.6**–ಮಳವಳ್ಳಿಯ ಜೆಡಿಎಸ್ ಮಾಜಿ ಶಾಸಕ ಡಾ.ಕೆ. ಅನ್ನದಾನಿ ವಿರುದ್ಧ ಅಕ್ರಮ ಸಂಬಂಧದ ಆರೋಪ ಕೇಳಿಬಂದಿದೆ.ಮಳವಳ್ಳಿ ಮೂಲದ ಪ್ರಸನ್ನ



ಎಂಬುವವರು ಈ ರೀತಿಯ ಆರೋಪ ಮಾಡಿದ್ದು, ಕೇಂದ್ರ ಸಚಿವ ಎಚ್. ಡಿ. ಕುಮಾರಸ್ವಾಮಿ ಬಳಿ ಗೋಳು ತೋಡಿಕೊಂಡಿದ್ದಾರೆ.

ಹೌದು. ಜಿಲ್ಲಾ ಪಂಚಾಯತ್ ಕಚೇರಿ ಯಲ್ಲಿ ಇಂದು ಕೇಂದ್ರ ಸಚಿವ ಹೆಚ್.ಡಿ. ಕುಮಾ ರಸ್ವಾಮಿ ನೇತ್ರತ್ವದಲ್ಲಿ ದಿಶಾ ➘2

## ಒಂದೇ ದಿನ ಪತಿ – ಪತ್ನಿ ದಾರುಣ ಸಾವು: ಮೂವರು ಮಕ್ಕಳು ಅನಾಥ-ಬೆಳಗಾವಿಯಲ್ಲಿ ಹೃದಯವಿದ್ರಾವಕ ಘಟನೆ




**ಬೆಳಗಾವಿ,ಏ.6**–ಆತ್ಮಹತ್ಯೆ ಮಾಡಿಕೊಂಡ ಪತ್ನಿಯನ್ನು ನೋಡಲು ಆಸ್ಪತ್ರೆಗೆ ಧಾವಿಸುತ್ತಿದ್ದ ಪತಿ ರಸ್ತೆ ಅಪಘಾತದಲ್ಲಿ ಮೃತಪಟ್ಟಿರುವ ಧಾರುಣ ಘಟನೆ ಬೆಳಗಾವಿ ಜಿಲ್ಲೆಯ ಬೈಲಹೊಂಗಲ ತಾಲೂಕಿನ ಅರವಳ್ಳಿ ಗ್ರಾಮದಲ್ಲಿ ಭಾನುವಾರ ಸಂಭವಿಸಿದೆ.ಮಧುರಾ ಕರೆಪ್ಪ ಮಾದರ (30), ಕರೆಪ್ಪ ಗಂಗಪ್ಪ ಮಾದರ(36) ಮೃತ ದಂಪತಿಗಳು. ಮಧುರಾ ಅನಾರೋಗ್ಯದಿಂದ ➘2

## ಬಾಗಲಕೋಟೆ, ದಾವಣಗೆರೆಯಲ್ಲಿ ಬಿಜೆಪಿಗೆ ದೊಡ್ಡ ಅಂತರದ ಗೆಲುವು : ಆರ್.ಅಶೋಕ್

**ಬೆಂಗಳೂರು,ಏ.6**–ದಾವಣಗೆರೆ ದಕ್ಷಿಣ ಮತ್ತು ಬಾಗಲಕೋಟೆಯಲ್ಲಿ ಬಿಜೆಪಿಗೆ ದೊಡ್ಡ ಅಂತರದ ಗೆಲುವು ಸಿಗಲಿದೆ. ಕಾಂಗ್ರೆಸ್‌ಗೆಲ ಎರಡೂ ಕಡೆ ಸಮಸ್ಯೆಗಳಿವೆ. ದಾವಣಗೆರೆಯಲ್ಲಿ ಮುಸ್ಲಿಮರು ಓಟ್ ಹಾಕಲ್ಲ ಅಂತಿದ್ದಾರೆ ಎಂದು ವಿರೋಧ ಪಕ್ಷದ ನಾಯಕ ಆರ್.ಅಶೋಕ್ ಅವರು ಹೇಳಿದ್ದಾರೆ.

ಮಲ್ಲೇಶ್ವರದ ಬಿಜೆಪಿ ರಾಜ್ಯ ಕಾರ್ಯಾಲಯ ಜಗನ್ನಾಥ ಭವನದಲ್ಲಿ ಇಂದು ಅವರು ಮಾಧ್ಯಮಗಳ ಜೊತೆ ಮಾತನಾಡಿದರು. ಸೋಲುವ ಸುಳಿವು ಸಿಕ್ಕ ಕೂಡಲೇ ಕೇರಳಕ್ಕೆ ಹೋದ ಮುಖ್ಯಮಂತ್ರಿ ಬಾಗಲ ಕೋಟೆಗೆ ದೌಡಾಯಿಸಿದ್ದಾರೆ ಎಂದರು. ರಾಜ್ಯದಲ್ಲಿ ಕಾಂಗ್ರೆಸ್ ಸರಕಾರ ಅಭಿವೃದ್ಧಿ ಮಾಡಿದ್ದರೆ,

ಗ್ಯಾರಂಟಿಗಳನ್ನು ಸರಿಯಾಗಿ ಕೊಟ್ಟಿದ್ದರೆ ಇಷ್ಟು ಕಷ್ಟ ಯಾಕೆ ಪಡಬೇಕಿತ್ತು. ಇವರು ➘2

## ಜಿಲ್ಲೆಯಲ್ಲಿ ಹೆಚ್ಚುತ್ತಿರುವ ಬಾಲಕಿಯರ ಅಪಹರಣ ಪಾಲಕರು ನಿಗಾವಹಿಸಲು ಎಸ್‌ಪಿ ಅರುಣಾಂಗ್ಶುಗಿರಿ

■ ಕನ್ನಡ ಮಾತೃ ಭೂಮಿ ವಾರ್ತೆ

**ರಾಯಚೂರು,ಏ.6**–ಶಾಲಾ ಹಾಗೂ ಕಾಲೇಜುಗಳ ಪರೀಕ್ಷೆಗಳು ಮುಗಿದ ಹಿನ್ನೆಲೆ ಅಪ್ರಾಪ್ತ ಬಾಲಕಿಯರನ್ನು ಪುಸಲಾಯಿಸಿ ಕರೆದುಕೊಂಡು ಹೋಗುವ ಪ್ರಕರಣಗಳು ಹೆಚ್ಚುತ್ತಿದ್ದು ಪೋಷಕರು ನಿಗಾವಹಿಸಿ ಬುದ್ದಿವಾದ ಹೇಳಬೇಕು ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಅರುಣಾಂಗ್ಶುಗಿರಿ ಹೇಳಿದರು.

ಅವರಿಂದು ನಗರದ ಜಿಲ್ಲಾ ಪೋಲಿಸ್ ವರಿಷ್ಠಾಧಿಕಾರಿ ಕಚೇರಿ ಸಭಾಂಗಣದಲ್ಲಿ ಮಕ್ಕಳ ಅಪಹರಣ ಮತ್ತು ನಾಪತ್ತೆ ಕುರಿತು ಇಲಾಖೆಗಳೊಂದಿಗೆ ಹಮ್ಮಿಕೊಂಡ ಸಭೆಯಲ್ಲಿ ಮಾತನಾಡಿ, ಇತ್ತೀಚಿನ ದಿನಗಳಲ್ಲಿ ಬಾಲಕಿಯರ ಹಾಗೂ ಯುವತಿ ಅಪಹರಣ ಮತ್ತು ನಾಪತ್ತೆ ಪ್ರಕರಣಗಳು ಹೆಚ್ಚಾಗಿ



ವರದಿಯಾಗುತ್ತಿದ್ದು, ಪೋಷಕರು ತಮ್ಮ ಮಕ್ಕಳ ಮೇಲೆ ಹೆಚ್ಚಿನ ನಿಗಾವಹಿಸುವುದು ಅಗತ್ಯವಾಗಿದೆ ಎಂದು ತಿಳಿಸಿದರು.

ವಿಶೇಷವಾಗಿ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ಪರೀಕ್ಷೆಗಳು ಮುಗಿದು ಹೋಗಿದ್ದು ಬಾಲಕಿಯರರನ್ನು ಪುಸಲಾಯಿಸಿ ಹೊರಗಡೆ ಕರೆದುಕೊಂಡು ಹೋಗುತ್ತಿರುವುದು ಕಂಡು ಬರುತ್ತಿದೆ,

ಈ ಮೂರ್ನಾಲ್ಕು ತಿಂಗಳು ಮಕ್ಕಳು ಹೊರಗೆ ಹೆಚ್ಚು ಸಮಯ ಕಳೆಯುವ ಸಂದರ್ಭಗಳಲ್ಲಿ ಎಚ್ಚರಿಕೆ ವಹಿಸಬೇಕು ಎಂದು ಸೂಚಿಸಿದರು.

18ವರ್ಷದೊಳಗಿನ ಬಾಲಕಿಯರು ಮೇಲೆ ಪೋಷಕರು ಹೆಚ್ಚಿನ ನಿಗಾವಹಿ ಸಬೇಕಾಗಿದೆ, ಮಕ್ಕಳಿಗೆ ಒಳ್ಳೆಯದು-ಕೆಟ್ಟದ ಬಗ್ಗೆ ಬುದ್ದಿವಾದ ಹೇಳಿ, ಅಪರಿಚಿತರೊಂದಿಗೆ ಸಂಪರ್ಕ ಬೆಳೆಸಬಾರದು ಎಂಬುದನ್ನು ಮನವರಿಕೆ ಮಾಡಿಕೊಡಬೇಕು ಎಂದು ಸಲಹೆ ನೀಡಿದರು. ಯಾವುದೇ ಅನುಮಾನಾಸ್ಪದ ಚಟುವಟಿಕೆ ಕಂಡುಬಂದಲ್ಲಿ ತಕ್ಷಣವೇ ಪೊಲೀಸ್ ಇಲಾಖೆಗೆ ಮಾಹಿತಿ ನೀಡುವಂತೆ ಮನವಿ ಮಾಡಿದ್ದಾರೆ. ಜಿಲ್ಲೆಯಲ್ಲಿ ಕಾನೂನು ಸುವ್ಯವಸ್ಥೆ ಕಾಪಾಡಲು ಪೊಲೀಸ್ ಇಲಾಖೆ ಅಗತ್ಯ ಕ್ರಮಗಳನ್ನು ಕೈಗೊಳ್ಳುತ್ತಿದೆ ಎಂದು ಎಸ್ಪಿ ತಿಳಿಸಿದರು.

ಈ ಸಂದರ್ಭದಲ್ಲಿ ಹೆಚ್ಚುವರಿ ದಿವಾಣಿ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಹೆಚ್.ಎಸ್ ಸಾತ್ವಿಕ್ ಸೇರಿದಂತೆ ವಿವಿಧ ಇಲಾಖೆಯ ಅಧಿಕಾರಿಗಳು ಉಪಸ್ಥಿತರಿದ್ದರು.

## ಜಿಲ್ಲೆಯಲ್ಲಿ ಇಸ್ಪೀಟ್ ,ಮಟ್ಕಾಜೂಜಾ ತಡೆಯಲು ಕ್ರಮ-ಎಸ್‌ಪಿ

■ ಕನ್ನಡ ಮಾತೃ ಭೂಮಿ ವಾರ್ತೆ

**ರಾಯಚೂರು,ಏ.6**–ಜಿಲ್ಲೆಯಲ್ಲಿ ಸಂಘಟಿತ ಅಪರಾಧಗಳಿಗೆ ಸಂಬಂಧಿಸಿದಂತೆ ಕಳೆದ ಮೂರು ತಿಂಗಳಿನಲ್ಲಿ 729ಕ್ಕೂ ಹೆಚ್ಚು ವಿವಿಧ ಅಪರಾಧಗಳಲ್ಲಿ ಪ್ರಕರಣಗಳನ್ನು ದಾಖಲಿಸಿಕೊಳ್ಳಲಾಗಿದೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಅರುಣಾಂಗ್ಶುಗಿರಿ ತಿಳಿಸಿದ್ದಾರೆ.

ಜನವರಿ, ಫೆಬ್ರವರಿ, ಮಾರ್ಚ್ ತಿಂಗಳಿನಲ್ಲಿ ಜಿಲ್ಲೆಯಲ್ಲಿ ಅಕ್ರಮ ಮರಳು ಸಾಗಾಟ, ಇಸ್ಪಿಟ್, ಮಟ್ಕಾ, ಜೂಜಾಟ ಸೇರಿದಂತೆ ಹಲವು ಸಂಘಟಿತ ಅಪರಾಧಗಳನ್ನು ಪತ್ತೆ ಹಚ್ಚಿ ಪ್ರಕರಣ ದಾಖಲಿಸಿಕೊಳ್ಳಲಾಗಿದೆ. ಇಂತಹ ಪ್ರಕರಣಗಳನ್ನು ಇನ್ನೂ ಹೆಚ್ಚೆಚ್ಚು ಪತ್ತೆ ಹಚ್ಚಲು ಜನರ ಸಹಕಾರ ಅಗತ್ಯವಾಗಿದ್ದು, ತಮ್ಮ ಸುತ್ತಮುತ್ತಲೂ ಯಾವುದೇ ಅಕ್ರಮ ಚಟುವಟಿಕೆಗಳು ಮತ್ತು ಅಪರಾಧಗಳು



ಕಂಡುಬಂದಲ್ಲಿ ಪೊಲೀಸ್ ತುರ್ತು ಸಹಾಯವಾಣಿ 112ಗೆ ಸಂಪರ್ಕಿಸಬಹುದಾಗಿದೆ ಎಂದು ಹೇಳಿದ್ದಾರೆ.

ಇಸ್ಪಿಟ್ ದಂದೆಯ 105 ಪ್ರಕರಣಗಳು, ಮಟ್ಕಾ 172 ಪ್ರಕರಣಗಳು, ಜೂಜಾಟ 22, ಕೋಳಿ ಪಂದ್ಯ 18, ಅಗತ್ಯ ಸರಕುಗಳ ಕಾಯ್ದೆಯಡಿ 13, ➘2

## ಸಿಎಚ್ ಪೌಡರ್ ಮಿಶ್ರಿತ ಸೇಂದಿ ಮಾರಾಟ: ಆರೋಪಿ ಬಂಧನ

■ ಕನ್ನಡ ಮಾತೃ ಭೂಮಿ ವಾರ್ತೆ

**ರಾಯಚೂರು,ಏ.6**– ಸಿ.ಎಚ್ ಪೌಡರ್ ಮಿಶ್ರತ ಸೇಂದಿ ಮಾರಾಟ ಮಾಡುತ್ತಿದ್ದ ವ್ಯಕ್ತಿಯನ್ನು ಮಾರ್ಕೆಟ್ ಯಾರ್ಡ್ ಪೊಲೀಸರು ಬಂಧಿಸಿದ್ದಾರೆ.ಏ. 5 ರಂದು ಬೆಳಿಗ್ಗೆ 8 ಗಂಟೆಗೆ ಗದ್ವಾಲ್ ರಸ್ತೆಯ ಎ. ಪಾಪರೆಡ್ಡಿ ಮಿಲ್ ಸಮೀಪ್ ಪೆಟ್ರೋಲಿಂಗ್ ವೇಳೆ ಖಚಿತ ಮಾಹಿತಿ ಮೇರೆಗೆ ದಾಳಿ ನಡೆಸಿದ ಪೊಲೀಸರು, ಕೆಂಚಪ್ಪ (40), ನವಾಬಗಡ್ಡ ನಿವಾಸಿಯನ್ನು ವಶಕ್ಕೆ ಪಡೆದುಕೊಂಡಿದ್ದಾರೆ. ಆರೋಪಿಯು ಸಿ.ಹೆಚ್ ಪೌಡರ್ ಮಿಶ್ರಿತ ಸೇಂದಿಯನ್ನು ಮಾರಾಟ ಮಾಡುತ್ತಿದ್ದನೆಂಬುದು ತನಿಖೆಯಲ್ಲಿ ಬಹಿರಂಗವಾಗಿದೆ.ಈ ಸಂಬಂಧ ಮಾರ್ಕೆಟ್ ಯಾರ್ಡ್ ಪೊಲೀಸ್ ಠಾಣೆಯಲ್ಲಿ ಗುನ್ನೆ ನಂ. 30/2026 ಅಡಿ ಬಿ.ಎನ್.ಎಸ್ -2023ರ 275, 286, 123 ಹಾಗೂ ಕೆ.ಇ ಕಾಯ್ದೆಯ 32, 34ರಡಿ ಪ್ರಕರಣ ದಾಖಲಿಸಲಾಗಿದೆ. ಬಂಧಿತ ಆರೋಪಿಯನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

## ಶಾಮನೂರು ಮಾಡಿರುವ ಕೆಲಸಗಳು ಮುಂದುವರೆಯಬೇಕೆಂದರೆ ಮೊಮ್ಮಗನನ್ನು ಗೆಲ್ಲಿಸಿ-ಸಿಎಂ

**ದಾವಣಗೆರೆ,ಏ.6**–ಹಿರಿಯರಾದ ಶಾಮನೂರು ಶಿವಶಂ ಕರಪ್ಪ ಅವರನ್ನು ದೊಡ್ಡ ಅಂತರದಿಂದ ಗೆಲ್ಲಿಸಿದ್ದಿರಿ, ಅವರು ದೈವಾಧೀನರಾದರು, ಇನ್ನೂ ಎರಡು ವರ್ಷಗಳ ಕಾಲ ಸಮಯ್‌ಇದೆ. ಅದಕ್ಕೆ ಈ ಕ್ಷೇತ್ರ ಭರ್ತಿ ಮಾಡಲು ಸಮರ್ಥರನ್ನು ಅಭ್ಯರ್ಥಿ ಮಾಡಿದ್ದೇವೆ. ಈ ಉಪಚುನಾವಣೆಯಲ್ಲಿ ಗೆಲುವು ನಮ್ಮದೇ ಎಂದು ಸಿಎಂ ಸಿದ್ದರಾಮಯ್ಯ ವಿಶ್ವಾಸ ವ್ಯಕ್ತಪಡಿಸಿದರು.


ದಾವಣಗೆರೆ ನಗರದ ಬೂದಾಳ್ ರಸ್ತೆಯ ಬಳಿ ಇಂದು ನಡೆದ ಸಮಾವೇಶದಲ್ಲಿ ಮಾತನಾಡಿದ ಅವರು, ಶಾಮನೂರು ಶಿವಶಂಕರಪ್ಪ ಅವರು ಮಾಡಿರುವ ಕೆಲಸಗಳು ಮುಂದುವರೆಯಬೇಕೆಂದರೆ ಅವರ ಮೊಮ್ಮಗನನ್ನು ಗೆಲ್ಲಿಸಬೇಕು. ಈ ಕ್ಷೇತ್ರದಲ್ಲಿ ಅವರು ನಾಲ್ಕು ಬಾರಿ ಶಾಸಕರಾಗಿ ಆಯ್ಕೆ ಆಗಿದ್ದರು. ನಮಗೆ ಮತ್ತು ಬಿಜೆಪಿ ಮಧ್ಯೆ ನೇರ ಸ್ಪರ್ಧೆ ಇದೆ. ಬಿಜೆಪಿ 9 ವರ್ಷಗಳ ಕಾಲ ಅಧಿಕಾರದಲ್ಲಿತ್ತು. ಅವರು ಏನ್ ಅಭಿವೃದ್ಧಿ ಕೆಲಸ ಮಾಡಿದ್ದೀವಿ ಎಂದು ಹೇಳಲ್ಲ. ನನ್ನನ್ನು ಟೀಕೆ ಮಾಡುವುದು ಅವರ ಕೆಲಸ. ಏಕೆಂದರೆ ನಾನು ಬಡವರ ಪರ ಕೆಲಸ ಮಾಡ್ತಿದ್ದೇನೆ ಎಂದು ವಿರೋಧದಿಂದ



ಟೀಕೆ ಮಾಡ್ತಾರೆ. ನಮ್ಮ ಪಕ್ಷ ಬಡವರನ್ನು ಒಳಗೊಂಡ ಪಕ್ಷ. ಎಲ್ಲಾ ಧರ್ಮ, ಜಾತಿಯವರನ್ನು ಜೊತೆಗೆ ಕರೆದೊಯ್ಯುವ ಕೆಲಸ ನಮ್ಮದು ಎಂದರು.

ಹಿಂದೂ – ಮುಸ್ಲಿಂರ ನಡುವೆ ಗಲಾಟೆ ಮಾಡಿಸುವುದೇ ಬಿಜೆಪಿಯವರ ಕೆಲಸ, ಬಹುಮತ ಪಡೆದು ಅಧಿಕಾರಕ್ಕೆ ಬಂದಿಲ್ಲ, ಆಪರೇಷನ್ ಕಮಲ ಮಾಡಿ ಸರ್ಕಾರ ರಚಿಸಿದ್ರು. ಕೋಟಿ ಕೋಟಿ ಹಣ ಸುರಿದು ಶಾಸಕರನ್ನು ಖರೀದಿಸಿ ಸರ್ಕಾರ ಮಾಡಿದ್ರು. ಸರ್ಕಾರ ಹಣ ಲೂಟಿ ಹೊಡೆಯುತ್ತಿದೆ ಎಂದು ಬಿ.ಎಸ್. ಯಡಿಯೂರಪ್ಪ ಆರೋಪ ಮಾಡಿದ್ರು. 25 ಸಾವಿರ ಕೋಟಿ ರೂಪಾಯಿ ಹಣ ಬಿಎಸ್‌ವೈ ಪುತ್ರ ಕೊಳ್ಳೆ ಹೊಡೆದಿದ್ದಾರೆ ಎಂದು ಯತ್ನಾಳ್ ಹೇಳಿದ್ದಾರೆ. ಇವರು ಕಡು ಭ್ರಷ್ಟರು. ನೀತಿ ನಿಯಮ, ಮಾನ ಮರ್ಯಾದೆ ಏನೂ ಇಲ್ಲ. ಪಕ್ಷದಿಂದ ಉಚ್ಚಾಟಿಸಲ್ಪಟ್ಟವರಿಂದ ಕ್ಯಾಂಪೇನ್ ಮಾಡ್ತಾರೆ ಎಂದರೆ ದುರಂತ. ಪೂರ್ವದಲ್ಲಿ ಸೂರ್ಯ ಹುಟ್ಟುವುದು ಎಷ್ಟು ಸತ್ಯವೋ, ನಮ್ಮ ಅಭ್ಯರ್ಥಿ ➘2

## ಗೃಹ ರಕ್ಷಕ ದಳಸಮಾದೇಷ್ಟರಾಗಿ ದೀಪಾ ಆಯ್ಕೆ ಜನರಿಗೆ ಭದ್ರತೆ ಒದಗಿಸಲು ಪ್ರಾಮಾಣಿಕ ಪ್ರಯತ್ನದ ಭರವಸೆ





■ ಕನ್ನಡ ಮಾತೃ ಭೂಮಿ ವಾರ್ತೆ

**ರಾಯಚೂರು,ಏ.6**–ರಾಯಚೂರು ಜಿಲ್ಲಾ ಗೃಹರಕ್ಷಕ ದಳದ ಸಮಾದೇಷ್ಟರನ್ನಾಗಿ (ಕಮಾಂಡೆಂಟ್) ಮಂಗಳವಾರಪೇಟೆಯ ದೀಪಾ ಗೊಡೆಪಾಡ್ ಅವರನ್ನು ನೇಮಿಸಲಾಗಿದೆ. ಹೆಚ್ಚುವರಿ ಅಧೀಕ್ಷಕ ಹರೀಶ ಇವರಿಂದ ಅಧಿಕಾರ ಸ್ವೀಕರಿಸಿದರು.

ನಗರದ ಗೃಹರಕ್ಷಕ ದಳ ಕಚೇರಿಯಲ್ಲಿ ಅಧಿಕಾರ ಸ್ವೀಕರಿಸಿ ಮಾತನಾಡಿದ ಅವರು, ಜಿಲ್ಲಾ ಗೃಹ ರಕ್ಷಕ ದಳದ ಕಮಾಂಡೆಂಟ್ ಆಗಿ ಅಧಿಕಾರ ಸ್ವೀಕರಿಸಿರುವುದು ಹೆಮ್ಮೆ ಹಾಗೂ ಖುಷಿಯ ವಿಚಾರವಾಗಿದ್ದು, ಜಿಲ್ಲೆಯಲ್ಲಿ ನಿಷ್ಠೆಯಿಂದ ಮತ್ತು ಮೇಲಾಕಾಧಿಕಾರಿಗಳ ಆದೇಶಗಳನ್ನು ಪಾಲಿಸಿ ಮುಂದೆ ಕಾರ್ಯ ನಿರ್ವಹಿಸುವುದಾಗಿ ಮತ್ತು ಗೃಹ ರಕ್ಷಕ ದಳದಿಂದ ಜನರಿಗೆ ಉತ್ತಮ ಸೇವೆ, ಭದ್ರತೆಯನ್ನು ಒದಗಿಸಲಾಗುವುದು ಎಂದು ಹೇಳಿದರು. ➘2

## ಬಿಪಿಎಲ್ ಕಾರ್ಡ ಸಮಸ್ಯೆ: ಅನಾರೋಗ್ಯದಿಂದ ಚಿಕಿತ್ಸೆ ಪಡೆಯಲು ಖಾಸಬೀ ಪರದಾಟ

■ ಕನ್ನಡ ಮಾತೃ ಭೂಮಿ ವಾರ್ತೆ

**ರಾಯಚೂರು,ಏ.6**–ನ್ಯಾಯಬೆಲೆ ಅಂಗಡಿಯಲ್ಲಿ ಬಯೋಮೆಟ್ರಿಕ್ ನೀಡಿಲ್ಲ ಎಂಬ ಕಾರಣಕ್ಕೆ ಬದುಕಿರುವ ಮಹಿಳೆ ಮರಣ ಹೊಂದಿದ್ದಾರೆ ಎಂದು ತೋರಿಸುತ್ತಿದ್ದು, ಇದೀಗ ಅನಾರೋಗ್ಯದಿಂದ ಚಿಕಿತ್ಸೆ ಪಡೆಯುತ್ತಿರುವ ಇವರಿಗೆ ಚಿಕಿತ್ಸೆ ಪಡೆಯಲು ತೊಂದರೆ ಉಂಟಾಗುತ್ತಿದ್ದು, ರೇಷನ್ ಕಾರ್ಡ್ ನೀಡಿದರೂ ಚಿಕಿತ್ಸೆ ದೊರೆಯದಂತಾಗಿದೆ.



ರಾಯಚೂರು ನಗರ ನಿವಾಸಿ ಖಾಜಾಬೀ ಎಂಬುವ ವರು, ಮುಂಬೈಗೆ ದುಡಿಯಲು ಹೋಗಿದ್ದು ಆದ್ದರಿಂದ ಕಳೆದ ಒಂದು ವರ್ಷದಿಂದ ನ್ಯಾಯಬೆಲೆ ಅಂಗಡಿಯಲ್ಲಿ ಬಯೋಮೆಟ್ರಿಕ್ ನೀಡಿದ್ದಿಲ್ಲ. ಇತ್ತೀಚೆಗೆ ಖಾಜಾಬೀ ಹೃದಾಯಾಪಘಾತದಿಂದ ಖಾಸಗಿ ಆಸ್ಪತ್ರೆವೊಂ ದರಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ಐಸಿಯುನಲ್ಲಿ ಚಿಕಿತ್ಸೆ ಪಡೆಯುತ್ತಿರುವ ಖಾಜಭೀ ಕುಟುಂಬದವರು, ಆರೋಗ್ಯ ಸೌಲಭ್ಯದಡಿ, ಉಚಿತ ಚಿಕಿತ್ಸೆಗೆ ರೇಷನ್ ಕಾರ್ಡ್ ನೀಡಲು ಮುಂದಾಗಿದ್ದಾರೆ. ಆದರೆ ಖಾಜಬೀ ಹೆಸರು ರೇಷನ್ ಕಾರ್ಡ್‌ನಲ್ಲಿ ಮರಣ ಹೊಂದಿದ್ದಾರೆ ಎಂದು ಬಂದಿದ್ದು, ಕುಟುಂಬದವರು ಆಶ್ಚರ್ಯದೊಂದಿಗೆ ಆತಂಕಕ್ಕೆ ಸಿಲುಕಿದ್ದಾರೆ.

ಬದುಕಿರುವ ಮಹಿಳೆಯನ್ನು ಸರ್ಕಾರಿ ದಾಖಲೆಗಳಲ್ಲಿ ಮರಣ ಹೊಂದಿದ್ದಾರೆ ಎಂಬು ವುದನ್ನು ಕಂಡು ಕುಟುಂಬ ಸದಸ್ಯರು ಗಾಬರಿಗೊಂಡಿದ್ದು, ಇದೀಗ ಬಿಪಿಎಲ್ ಕಾರ್ಡ್ ನೀಡಿದರೂ ಚಿಕಿತ್ಸೆ ದೊರೆಯದಂತಾಗಿದೆ. ಮತ್ತು ಚಿಕಿತ್ಸೆಯನ್ನು ಕೊಡಿಸಲು ಕುಟುಂಬದವರಿಗೆ ಕಷ್ಟಕರವಾಗಿದೆ. ಸರ್ಕಾರದ ಈ ಗೊಂದಲದ ನಿಯಮ ಗಳಿಂದ ಬಡ ಜನರು ಸಂಕಷ್ಟ ಪಡುವಂತಾಗಿದ್ದು, ಕೂಡಲೇ ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆಯ ಅಧಿಕಾರಿಗಳು ಈ ಗೊಂದಲ ನಿವಾರಿಸಲು ಮತ್ತು ಖಾಜಬೀ ಸೇರಿ ಇಂತಹ ಘಟನೆಗಳಿಗೆ ಒಳಗಾದ ಜನರ ಸಮಸ್ಯೆಗಳನ್ನು ಪರಿಹರಿಸಲು ಮುಂದಾಗಬೇಕು ಎನ್ನುವುದು ಕುಟುಂಬಸ್ಥರ ಮನವಿಯಾಗಿದೆ.

## ಎಲ್‌ಐಸಿ ಕಚೇರಿಯಲ್ಲಿ ನೀರಿನ ಅರವಟ್ಟಿಗೆ ಪ್ರಾರಂಭ



■ ಕನ್ನಡ ಮಾತೃ ಭೂಮಿ ವಾರ್ತೆ

**ರಾಯಚೂರು,ಏ.6**–ನಗರದ ಭಾರತೀಯ ಜೀವ ವಿಮಾ ನಿಗಮದ ಕಛೇರಿಯ ಮುಖ್ಯ ಧ್ವಾರದಲ್ಲಿ ವಿಮಾ ನೌಕರರ ಸಂಘದಿಂದ ನೀರಿನ ಅರವಟಿಗೆಯನ್ನು ಆರಂಭಿಸಲಾಯಿತು.

ಇದೇ ವೇಳೆ ಸಂಘದ ವಿಭಾಗೀಯ ಮುಖ್ಯಸ್ಥ ಪ್ರಸಾದ ಬಸವರಾಜ ಮಾತನಾಡಿ, ಕಳೆದ 25 ವರ್ಷಗಳಿಂದಲೂ ಸಂಘವು ಶುದ್ಧ ಕುಡಿಯುವ ನೀರಿನ ಅರವಟಿಗೆಯ ಸೇವೆಯನ್ನು ನಿರಂತರವಾಗಿ ಸಲ್ಲಿಸುತ್ತಿದ್ದು, ಇಂತಹ ಕಾರ್ಯಕ್ರಮದ ಉದ್ಘಾಟನೆ ಮಾಡಿರುವುದು ತುಂಬಾ ಸಂತೋಷ ತಂದಿದೆ ಎಂದು ಹೇಳಿದರು.

ಕಛೇರಿಯ ನೌಕರರಷ್ಟೇ ಅಲ್ಲದೇ ಈ ಮಾರ್ಗದಲ್ಲಿ ಸಂಚರಿಸುವ ಸಾರ್ವಜನಿಕರೂ ಇದರ ಸದುಪಯೋಗ ಪಡೆದುಕೊಳ್ಳಬೇಕು ಎಂದು ತಿಳಿಸಿದರು. ರಾಯಚೂರಿನಲ್ಲಿ ಹೆಚ್ಚಿದ ಬಿಸಿಲಿನ ಹಿನ್ನೆಲೆಯಲ್ಲಿ ಇಂತಹ ಅರವಟಿಗೆಗಳು ಅಗತ್ಯವಾಗಿದ್ದು, ಸಂಘದ ಕಾರ್ಯ ಶ್ಲಾಘನೀಯವಾಗಿದೆ ಎಂದು ಹೇಳಿದರು. ➘2

## ಏ.7ರಂದು ಶಾಂತರಸ ನೆನಪು ಕಾಯಕ್ರಮ ಉಪನ್ಯಾಸ, ಗಜಲ್ ವಾಚನ- ರಂಗಸ್ವಾಮಿ

■ ಕನ್ನಡ ಮಾತೃ ಭೂಮಿ ವಾರ್ತೆ

**ರಾಯಚೂರು,ಏ.6**–ರಂಗಸಿರಿ ಸಾಂಸ್ಕೃತಿಕ ಕಲಾ ಬಳಗ, ಸಂಸ ಥೀಯೇಟರ್ ಬೆಂಗಳೂರುಗಳ ಸಹಯೋಗದಲ್ಲಿ ಏ.7 ರಂದು ನಗರದ ನವಯುಗ ಪದವಿ ಮಹಾವಿದ್ಯಾಲಯದಲ್ಲಿ ಶಾಂತರಸರ ನೆನಪು ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ರಂಗಸಿರಿ ಸಾಂಸ್ಕೃತಿಕ ಕಲಾ ಬಳಗದ ಅಧ್ಯಕ್ಷ ರಂಗಸ್ವಾಮಿ ಹೇಳಿದರು.

ಅವರಿಂದು ಮಾಧ್ಯಮಗೋಷ್ಠಿ ಉದ್ದೇಶಿಸಿ ಮಾತನಾಡಿ ಕಾರ್ಯಕ್ರಮವನ್ನು ಏಮ್ಸ್ ಹೋರಾಟಗಾರ ಡಾ.ಬಸವರಾಜ ಕಳಸ ಉದ್ಘಾಟಿಸಲಿದ್ದು, ಅಧ್ಯಕ್ಷತೆಯನ್ನು ನವಯುಗ ಪದವಿ ಮಹಾವಿದ್ಯಾಲಯ ಪ್ರಾಂಶುಪಾಲ ಈರಣ್ಣ ಪೂಜಾರಿವಹಿಸಲಿದ್ದಾರೆ. ಹಿರಿಯ ಸಾಹಿತಿ ಬಾಬು ಬಂಡಾರಿಗಲ್ ಉಪನ್ಯಾಸ ನೀಡಲಿದ್ದಾರೆ.

ಮುಖ್ಯ ಅತಿಥಿಗಳಾಗಿ ಎಎಂಇ ಕಾಲೇಜಿನ ಕೋಶಾಧ್ಯಕ್ಷ ಭೀಮನಗೌಡ ಇಟಗಿ, ಸಾಹಿತಿ ಡಾ.ರಾಜಶ್ರೀ ಕಲ್ಲೂರಕರ್, ಆಕಾಶವಾಣಿ ಮುಖ್ಯಸ್ಥ ➘2



## ಹಿಂದಿ ಭಾಷೆಗೆ ರಾಜ್ಯಪಾಲರ ಒತ್ತು ವಿರೋಧಿಸಿ ಕರ್ನಾಟಕ ರಕ್ಷಣಾ ವೇದಿಕೆ ಪ್ರತಿಭಟನೆ




■ ಕನ್ನಡ ಮಾತೃ ಭೂಮಿ ವಾರ್ತೆ

**ರಾಯಚೂರು,ಏ.6**–ಕರ್ನಾಟಕ ರಾಜ್ಯದ ಹಿತಾಸಕ್ತಿಗಳಿಗೆ ವಿರುದ್ಧವಾಗಿ ನಡೆದುಕೊಳ್ಳುತ್ತಿರುವ ರಾಜ್ಯಪಾಲರ ವರ್ತನೆ ಖಂಡನೀಯವಾಗಿದೆ ಎಂದು ಕರ್ನಾಟಕ ರಕ್ಷಣಾ ವೇದಿಕೆ ಜಿಲ್ಲಾ ಘಟಕದ ವತಿಯಿಂದ, ಜಿಲ್ಲಾಡಳಿತದ ಮೂಲಕ ಪ್ರಧಾನಮಂತ್ರಿಗೆ ಮನವಿ ಸಲ್ಲಿಸಿ, ರಾಜ್ಯಪಾಲ ಥಾವರಚಂದ್ ಗೆಹ್ಲೋಟ್ ಅವರ ನಡೆಗೆ ತೀವ್ರ ಆಕ್ಷೇಪ ವ್ಯಕ್ತಪಡಿಸಲಾಯಿತು.

ನಗರದ ಜಿಲ್ಲಾಡಳಿತ ಭವನದಲ್ಲಿ ಮನವಿ ಸಲ್ಲಿಸಿದ ಅವರು, ಎಸ್.ಎಸ್.ಎಲ್.ಸಿ ಪರೀಕ್ಷೆಗಳಲ್ಲಿ ತೃತೀಯ ಭಾಷೆಗೆ ಗ್ರೇಡಿಂಗ್ ವ್ಯವಸ್ಥೆ ಜಾರಿಗೆ ತಂದಿರುವ ರಾಜ್ಯ ಸರ್ಕಾರದ ನಿರ್ಧಾರವನ್ನು ಮರುಪರಿಶೀಲಿಸುವಂತೆ ರಾಜ್ಯಪಾಲರು ಮುಖ್ಯ ಕಾರ್ಯದರ್ಶಿಗಳಿಗೆ ಪತ್ರ ಬರೆದಿರುವುದು ಅತ್ಯಂತ ಆಕ್ಷೇಪಾರ್ಹವಾಗಿದೆ ಎಂದು ಆರೋಪಿಸಿದರು.

ಈ ಕ್ರಮವು ಕರ್ನಾಟಕದಲ್ಲಿ ಹಿಂದಿ ಹೇರಿಕೆಯನ್ನು ಶಾಶ್ವತಗೊಳಿಸುವ ಪ್ರಯತ್ನವೆಂದು ಕಾಣುತ್ತದೆ. ➘2

## ಗಂಗಾವತಿ: ಶ್ರಮಜೀವಿ ಕಟ್ಟಡ ಕಾರ್ಮಿಕರ 5ನೇ ರಾಜ್ಯ ಸಮಾವೇಶ ಡಾ.ಈಶ್ವರ್ ಸವಡಿಗೆ ಶ್ರಮಜೀವಿ ಕಾಯಕ ರತ್ನ ಪ್ರಶಸ್ತಿ - ಶಿವಕುಮಾರ್‌ಗೌಡ



ಕನ್ನಡ ಮಾತೃ ಭೂಮಿ ವಾರ್ತೆ

**ಗಂಗಾವತಿ,ಏ.05**-ಕರ್ನಾಟಕ ರಾಜ್ಯ ಶ್ರಮಜೀವಿ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿ ಕರ ಸೇವಾ ಸಂಘವು ಗಂಗಾವತಿಯ ತಾಲೂಕಾ ಸರಕಾರಿ ಉಪ ವಿಭಾಗ ಆಸ್ಪ ತ್ರೆಯಲ್ಲಿ ರಾಜ್ಯಮಟ್ಟದ ಬೃಹತ್ ಸಮಾ ವೇಶವನ್ನು ಏಪ್ರೇಲ್ 07 ರಂದು ಬೆಳಗ್ಗೆ 10 ಗಂಟೆಗೆ ಹಮ್ಮಿಕೊಂಡಿದ್ದು, ಆಸ್ಪತ್ರೆ ಸರ್ವ ಸಿಬ್ಬಂದಿಗೆ ಸನ್ಮಾನ ಹಾಗು ಖ್ಯಾತ ವೈದ್ಯಾಧಿಕಾರಿ ಈಶ್ವರ ಸವಡಿಯವರಿಗೆ ಶ್ರಮಜೀವಿ ಕಾಯಕ ರತ್ನ ಪ್ರಶಸ್ತಿ ನೀಡ ಲಾಗುವುದು ಎಂದು ಸಂಸ್ಥಾಪಕ ರಾಜ್ಯ ಧ್ಯಕ್ಷ ಶಿವಕುಮಾರಗೌಡ ತಿಳಿಸಿದರು.

ಅವರು, ನಗರದ ಪತ್ರಿಕಾ ಭವನ ದಲ್ಲಿ ಪತ್ರಿಕಾ ಗೋಷ್ಟಿಯ್ನನುದೇಶಿಸಿ ಮಾತನಾಡಿದರು.

ಕರೋನಾ ಹಾಗು ಇತರೆ ತುರ್ತು ಸಂರ್ಭದಲ್ಲಿ ವೈದ್ಯರು ಹಾಗು ಸಿಬ್ಬಂದಿ ತಮ್ಮ ಪ್ರಾಣ ಲೆಕ್ಕಿಸದೆ ಸಮಾಜಕ್ಕೆ ಸೇವೆ ಸಲ್ಲಿಸಿದ್ದು, ಗಂಗಾವತಿ ಆಸ್ಪತ್ರೆಯು ರಾಜ್ಯಕ್ಕೆ ಮಾದರಿಯಾಗಿದೆ ಹೀಗಾಗಿ ಆಸ್ಪತ್ರೆಯ ಸರ್ವ ಸಿಬ್ಬಂದಿ ಸೇವಾ ಮನೋಭಾವ ಗಮನಿಸಿ ಸನ್ಮಾನಿಸಲಾಗುತ್ತಿದ್ದು,


ಇದೇ ಸಂದರ್ಭದಲ್ಲಿ ಕಾರ್ಮೀಕರ ಹಲವು ಬೇಡಿಕೆ ಈಡೇರಿಕೆ ಕುರಿತು ಗಮನ ಸೆಳೆಯಲಾಗುವುದು, ಕಾರ್ಮಿಕರಿಗೆ ಇಎಸ್ಐ ಸೌಲಭ್ಯ, ಸೂಕ್ತ ಆಸ್ಪತ್ರೆಯಲ್ಲಿ ಚಿಕಿತ್ಸೆ ಅವಕಾಶ ನೀಡಬೇಕು ಮತ್ತು ವೈದ್ಯಕೀಯ ವೆಚ್ಚ ಚಿಕಿತ್ಸೆಯ ಹಂತದಲ್ಲೇ ನೀಡಬೇಕು ಎರಡು ಲಕ್ಷದಿಂದ ಏಳು ಲಕ್ಷಕ್ಕೆ ಏರಿಸಬೇಕು, ಮಕ್ಕಳ ವಿದ್ಯಾಭ್ಯಾಸದ ಸ್ಕಾಲರ್ ಶಿಪ್ ಕಡಿತಗೊಳಿಸಿದ್ದು, ಹೆಚ್ಚಳಗೊಳಿಸಿದರೆ ಉನ್ನತ ಶಿಕ್ಷಣಕ್ಕೆ ಅನುಕೂಲವಾಗಲಿದೆ. ಮದುವೆ ವೆಚ್ಚ ಕೇವಲ 60 ಸಾವಿರ ನೀಡಲಾಗುವುದು ಇದನ್ನು ಎರಡು ಲಕ್ಷಕ್ಕೆ ಏರಿಸಬೇಕೆಂದು ಹಲವು ಬಾರಿ ಮನವಿ ಮಾಡಿದರು ಸರಕಾರ ಪರಿಗಣನೆಗೆ ತೆಗೆದುಕೊಳ್ಳುತ್ತಿಲ್ಲ ಶೀಘ್ರ ಬೇಡಿಕೆ ಈಡೇರಿಸಬೇಕೆಂದು ಒತ್ತಾಯಿಸಿದರು.

ಕೊಪ್ಪಳ ಜಿಲ್ಲಾ ಕಟ್ಟಡ ಕಾರ್ಮಿಕ ಸಂಘದ ಅಧ್ಯಕ್ಷ ಪಂಪಾಪತಿ ಇಂಗಳಗಿ ಮಾತನಾಡಿ, ಕಾರ್ಯಕ್ರಮಕ್ಕೆ ರಾಜ್ಯದಾದ್ಯಂತ ಸಾವಿರಾರು ಕಾರ್ಮಿಕರು ಗಣ್ಯರು ಆಗಮಿಸಲಿದ್ದಾರೆ, ಗಂಗಾವತಿ ಶಾಸಕ ಗಾಲಿ ಜನಾರ್ದನರೆಡ್ಡಿ, ಮಾಜಿ ಸಚಿವ ಇಕ್ಬಾಲ್ ಅನ್ಸಾರಿ,ಪರಣ್ಣ ಮುನವಳ್ಳಿ, ಕಾರ್ಮಿಕ ಇಲಾಖೆ ಜಿಲ್ಲಾ ಅಧಿಕಾರಿ ಸುಧಾ ಹಾಗು ತಾಲೂಕು ಅಧಿಕಾರಿ ಎಂ.ಅಶೋಕ್ ಇವರು ಆಗಮಿಸಲಿದ್ದಾರೆ ಕಾರ್ಮಿಕರು ಹೆಚ್ಚಿನ ಸಂಖ್ಯೆ ಯಲ್ಲಿ ಆಗಮಿಸಿ ಕಾರ್ಯಕ್ರಮ ಯಶಸ್ಸುಗೊಳಿಸಬೇಕೆಂದು ಮನವಿ ಮಾಡಿದರು.

ಕೊಪ್ಪಳ ಜಿಲ್ಲಾ ಉಪಾಧ್ಯಕ್ಷ ಬಸವ ರಾಜ್ ಮೇಸ್ತ್ರಿ, ರಾಜ್ಯ ಖಜಾಂಚಿ ವೀರೇಶ್ ಕಂದಗಲ್, ಪದಾಧಿಕಾರಿಗಳಾದ ಮಾರೇಶ್ ಮೇಸ್ತ್ರಿ, ಸುಕುಮುನಿ, ಚಂದಪ್ಪ, ಹನುಮಂತ ಮೇಸ್ತ್ರಿ, ಮಹೇಶ್ ಮೇಸ್ತ್ರಿ, ರಘುನಾಥ, ಶ್ರೀನಿವಾಸ್ ಮೇಸ್ತ್ರಿ, ಇಮಾಮ್‌ಸಾಬ್ ವಡ್ಡರಹಟ್ಟಿ ಇತರರಿದ್ದರು.

## ಸ್ವಂತ ಖರ್ಚಿನಲ್ಲಿ ಸಾರ್ವಜನಿಕ ರಸ್ತೆಯ ಅಡಿಗಲ್ಲು ಸಮಾರಂಭ ನೇರವೇರಿಸಿದ ಜೆ.ಎಮ್.ಕೊರಬು





ಕನ್ನಡ ಮಾತೃ ಭೂಮಿ ವಾರ್ತೆ

**ಅಫಜಲಪುರ,ಏ.05**-ತಾಲೂಕಿನ ಮಾಶಾಳ ಗ್ರಾಮದ ರಾಜ್ಯ ಕೆಪಿಸಿಸಿ ಹಿಂದುಳಿದ ವರ್ಗಗಳ ಉಪಾಧ್ಯಕ್ಷ ಜೆ.ಎಮ್.ಕೊರಬುರವರ ನೇತೃತ್ವದಲ್ಲಿ ಸಾವಿರಾರು ಜನ ರೈತರಿಗೆ ಅನುಕೂಲವಾಗುವ ದಿಕ್ಸಂಗಾ ರಸ್ತೆ ನಿರ್ಮಾಣಕ್ಕೆ ಅಡಿಗಲ್ಲು ಸಮಾರಂಭ ನೇರವೇರಿತು.

ಕಾರ್ಯಕ್ರಮ ಉದ್ದೇಶಿಸಿ ಮಾತನಾ ಡಿದ ಕೆಪಿಸಿಸಿ ರಾಜ್ಯ ಹಿಂದುಳಿದ ವರ್ಗಗಳ ಉಪಾಧ್ಯಕ್ಷ ಜೆ.ಎಮ್. ಕೊರಬು ನಾನು ವೃತ್ತಿಜೀವನದ ಸರಕಾರಿ ಕೆಲಸ ನಿವೃತ್ತಿ ಆದ ಮೇಲೆ ಈ ಭಾಗ ದಲ್ಲಿ ರೈತರಿಗಾಗಿ ನೀರಾವರಿ ಮಾಡುವ ಕನಸು ಕಂಡವನು

ನಾನು.ಯಾವುದೇ ರಾಜಕೀಯ ಆಸೆ ಇಟ್ಟುಕೊಂಡು ಬಂದವನಲ್ಲ.ನಿಮ್ಮೆಲ್ಲರ ಸಹಕಾರ ಮಾರ್ಗದರ್ಶನವಿದ್ದರೆ ರಾಜಕೀಯವಾಗಿ ಮುಂದಯವರೆಯುತ್ತಿನೆ.ಇಲ್ಲದಿದ್ದರೆ ನನಗೆ ಸಹ ವಾಸವೇ ಬೇಡ.ಆದರೆ ಈ ಭಾಗದಲ್ಲಿ ನೀರಾವರಿ ಮಾಡಲು ಮಾಜಿ ಶಾಸಕ ಮಾಲಿಕಯ್ಯ ಗುತ್ತೇದಾರ ಹಾಗೂ ಶಾಸಕ ಎಮ್.ವೈ.ಪಾಟೀಲರು ಬಹಳಷ್ಟು ಕೆಲಸ ಮಾಡಿದ್ದಾರೆ. ಆದರೆ ಭೀಮಾ ನದಿಯಿಂದ ಈ ಭಾಗಕ್ಕೆ ಕಾಲುವೆ ಮು ಖಾಂತರ ನೀರು ಹರಿಸಿದರೆ ಅಷ್ಟೆ ಸಾಕು ಎಂದರು.ಕಾರ್ಯಕ್ರಮದ ಅಡಿಗಲ್ಲು ಸಮಾರಂಭಕ್ಕೆ ಶಾಸಕರು ಬಾರದೆ ಇರುವುದು ಬಹಳಷ್ಟು ನೋವು ತಂದಿದೆ. ನಾನು ಅವರ ಮೇಲೆ ಬಹಳಷ್ಟು ನಂಬಿಕೆ ಪ್ರೀತಿ ಇಟ್ಟುಕೊಂಡಿದ್ದೆ,ಅವರು ಯಾರ ಮಾತು ಕೇಳಿ ಬರಲಿಲ್ಲವೊ ಗೊತ್ತಿಲ್ಲ. ಆದರೆ ಮುಂದಿನ ದಿನಗಳಲ್ಲಿ ಈ ರೀತಿ ಆಗದೆ ಇದ್ದರೆ ಒಳ್ಳೆಯದು.ಶಾಸಕರಿಗೆ ಬಿಡುವಿಲ್ಲದ ಕೆಲಸಗಳು ಇರಬಹುದು ಆದರೆ ನಾನು ಬಹುದಿನಗಳಿಂದ ನಮ್ಮ ಗ್ರಾಮದ ರೈತರೊಂದಿಗೆ ಶಾಸಕರಿಗೆ ಮನವಿ ಮಾಡಿದ್ದೆ ಅವರು ಕೂಡಾ ಬರುವುದಾಗಿ ತಿಳಿಸಿದರು. ಆದರೆ ಅವರ ಅನುಪಸ್ಥಿತಿ ನನಗೆ ನೋವು ತಂದಿದೆ ಎಂದರು.

ತದನಂತರ ಮಾತನಾಡಿದ ಮಾಜಿ ಸಚಿವ ಮಾಲಿಕಯ್ಯ ಗುತ್ತೇದಾರ ಜೆ. ಎಮ್.ಕೊರಬುರವರು ಸಮಾಜಮುಖಿ ಕೆಲಸಗಳಿಗಾಗಿ ತಮ್ಮ ಸ್ವಂತ ಸಂಪಾದನೆಯ ಹಣ ವ್ಯಯ ಮಾಡುತ್ತಾರೆ.ಈ ಬಭಾಗದ ರೈತರಿಗಾಗಿ ನೀರಾವರಿ ಮಾಡುವ ಇಂಗಿತ ವ್ಯಕ್ತಪಡಿಸಿದ ಅವರು ನಾನು ಕೊರಬು ಮುಖ್ಯಮಂತ್ರಿಗಳಿಗೆ ಮನವಿ ಮಾಡಿ ನೀರಾವರಿ ಕೆಲಸಗಳ ಜೊತೆಗೆ ರೈತುಪಯೋಗಿ ಕೆಲಸಗಳನ್ನು ಮಾಡಲು ತಿಳಿಸುತ್ತೆವೆ ಎಂದರು.ದಿಕ್ಸಂಗಾ ಮುಖ್ಯ ರಸ್ತೆ ವರೆಗಿನ ಒಟ್ಟು 2.50 ಕಿ.ಮೀ ರಸ್ತೆಗೆ ಸುಮಾರು 12 ಲಕ್ಷ ಖರ್ಚಾಗುತ್ತದೆ. ಕೊರಬುರವರು ರೈತರ ಸಹಾಯದಿಂದ ಮಾಡುವುದಾಗಿ ತಿಳಿಸಿ ದ್ದಾರೆ. ಗುಣಮಟ್ಟದ ರಸ್ತೆ ನಿರ್ಮಾಣ ವಾಗಲಿ ಎಂದು ಆಶಿಸಿದರು.

ಶಾಸಕರು ಈ ಕಾರ್ಯಕ್ರಮಕ್ಕೆ ಬಾರದೆ ಇರುವು ದಕ್ಕೆ ಯಾರು ಕಾರಣ ಎಂದು ಎಲ್ಲರಿಗೂ ತಿಳಿದಿರುವ ವಿಷಯ ನಾನೇನು ಹೆಚ್ಚಿಗೆ ಹೇಳುವುದಿಲ್ಲ ಎಂದರು.ಮನುಷ್ಯ ಹೋಗುವಾಗ ಏನನ್ನು ಕೊಂಡ್ಯೊಯುವುದಿಲ್ಲ.ಇರುವವರೆಗೆ ಏನಾದರೂ ಸಾರ್ವಜನಿಕ ಕೆಲಸ ಮಾಡಬೇಕು ಎಂದರು.

ತದನಂತರ ಕಾರ್ಯಕ್ರಮಕ್ಕೆ ತಡವಾಗಿ ಶಾಸಕ ಎಮ್.ವೈ.ಪಾಟೀಲರು ಹಾಗೂ ಕಾಂಗ್ರೆಸ್ ಕಾರ್ಯಕರ್ತರು ಆಗಮಿಸಿ ಉಪಹಾರ ಭೋಜನ ಸವಿದರು.

ಕಾರ್ಯಕ್ರಮದ ದಿವ್ಯ ಸಾನಿಧ್ಯವನ್ನು ಷ.ಬ್ರ.ವಿಶ್ವಾರಾಧ್ಯ ಮಳೇಂದ್ರ ಶಿವಾಚಾರ್ಯರು,ಚಂದ್ರಕಾಂತ ದುಂಡಪ್ಪ ಪೂಜಾರಿ,

ಶ್ರೀಪಾದ ಒಡೆಯರ, ಸಿದ್ದಯ್ಯಸ್ವಾಮಿ ಹಿರೇಮಠ, ಗುರುಬಾಳ ಜಕಾಪುರ,ಕೆಪಿಸಿಸಿ ರಾಜ್ಯ ಹಿಂದುಳಿದ ವರ್ಗಗಳ ಉಪಾಧ್ಯಕ್ಷರಾದ ಜೆ.ಎಮ್. ಕೊರಬು,ನಾನಾಗೌಡ ಪಾಟೀಲ, ಶಂಕರಲಿಂಗ ಮೇತ್ರೆ,ಮಲ್ಲುಗೌಡ ಪಾಟೀಲ, ಸಾವಕಾರ,ಮನಿಯಾರ ಪಾಟೀಲ ಸೇರಿದಂತೆ ಹಲವರು ಉಪಸ್ಥಿತರಿದ್ದರು.

# ಮೀಸಲಾತಿ ದುರ್ಬಳಕೆ : ಜಾತಿ ಪ್ರಮಾಣ ಪತ್ರ ರದ್ದು ಪಡಿಸಲು ಹಿಂದುಳಿದ ಜಾತಿಗಳ ಒಕ್ಕೂಟ ಆಗ್ರಹ



ಕನ್ನಡ ಮಾತೃ ಭೂಮಿ ವಾರ್ತೆ

**ದೇವದುರ್ಗ,ಏ.6**-ತಾಲೂಕಿನ ವೀರಶೈವ ಲಿಂಗಾಯತ ಬಣಜಿಗ ಸಮಾಜದ ಗುತ್ತಿಗೆದಾರರು 2ಅ ಮೀಸಲಾತಿಯನ್ನು ದುರ್ಬಳಕೆ ಮಾಡಿಕೊಂಡಿರುವುದು ಬೆಳಕಿಗೆ ಬಂದಿರುತ್ತದೆ. 3ಅ ಮೀಸಲಾತಿ ಪಟ್ಟಿ ಯಲ್ಲಿ ಬರುವ ಲಿಂಗಾಯತ ಬಣಜಿಗ ಜನಾಂಗದ ವ್ಯಕ್ತಿಗಳ 2ಅ ಜಾತಿ ಪ್ರಮಾಣ ಪತ್ರ ರದ್ದು ಪಡಿಸಬೇಕೆಂದು ಶನಿವಾರ ತಹಸೀಲ್ದಾರ್ ನಾಗಮ್ಮ ಕಟ್ಟಿ ಮನಿ ಅವರಿಗೆ ತಾಲೂಕ್ ಹಿಂದುಳಿದ ಜಾತಿಗಳ್ ಒಕ್ಕೂಟದ ಪದಾಧಿಕಾರಿಗಳು ಮನವಿ ಪತ್ರ ಸಲ್ಲಿಸಿ ಆಗ್ರಹಿಸಿದರು.

ಕೆಲ ಗುತ್ತಿಗೆದಾರರು 3ಅ ಕೆಟಗೆರಿಯಲ್ಲಿ ಬರುವ ಹಿಂದು ಲಿಂಗಾಯತ ಬಣಜಿಗ ಜಾತಿಯವರು, 2ಅ ಕೆಟಗೆರಿಯಡಿ ಜಾತಿ ಪ್ರಮಾಣ ಪಡೆದು ಉದ್ಯೋಗ ಮೀಸಲಾತಿಯಡಿ ವಂಚನೆ ಮಾಡಿರುವುದು ಜಾತಿ ಪ್ರಮಾಣ ಪತ್ರಗಳ ಮೂಲಕ ದೃಢಪಟ್ಟಿದೆ.

ರಾಜ್ಯ ಸರಕಾರ 2011 ರಲ್ಲಿ ಬಣಜಿಗ ಜಾತಿಯನ್ನು ಶಿಕ್ಷಣಕ್ಕಾಗಿ ಪ್ರವರ್ಗ 2ಎ ಮತ್ತು ಉದ್ಯೋಗಕ್ಕಾಗಿ ಪ್ರವರ್ಗ 3ಅ ಪ್ರಮಾಣ ಪತ್ರ ನೀಡುವಂತೆ ಸರಕಾರ ಆದೇಶ ನೀಡಿದ್ದರು ಸಹ ಮತ್ತು ತಾಲೂಕಿನ ಕೆಲ ಲಿಂಗಾಯತ ಬಣಜಿಗ ಸಮಾಜದವರು ಪ್ರವರ್ಗ 2ಅ ಜಾತಿ ಪ್ರಮಾಣ ಪತ್ರ ಪಡೆಯಲಾಗಿದೆ.

ಪ್ರವರ್ಗ 2ಎ ಮೀಸಲಾತಿ ಜಾತಿ ಪ್ರಮಾಣ ಪತ್ರ ಪಡೆದ ಈ ಕೆಳಗಿನ ಹೆಸರಿನಲ್ಲಿರುವ ಜಾತಿ ಆದಾಯ ಪ್ರಮಾಣ ಪತ್ರಗಳನ್ನು ಕೂಡಲೇ ರದ್ದು ಪಡಿಸಬೇಕು ಎಂದು ಆಗ್ರಹಿಸಿದರು.

1) RD1218354091738 – ಎ ಬಸವರಾಜಪ್ಪ ತಂದೆ ಎ ಲಿಂಗಣ್ಣ ಅಮಾರಪೂರು,

2)RD1218355013025 – ವೀರಭದ್ರಪ್ಪಂದೆ ಶಿವಣ್ಣ ಸೋಮನ ಮರಡಿ,

3) RD1218355056115 – ರಾಜಶೇಖರ ತಂದೆ ಬಸಣ್ಣ ದೇವದುರ್ಗ,

4) RD1218354091738 – ಮಹಾದೇವಪ್ಪ ತಂದೆ ಸುರೇಂದ್ರಗೌಡ ಬಿ.ಗಣೇಕಲ್

ಇವರುಗಳು ಮೂಲತ ವೀರಶೈವ ಲಿಂಗಾಯತ, ಹಿಂದು ಬಣಜಿಗ ಜಾತಿಗೆ ಸೇರಿದ್ದು ಇವರು ಪ್ರವರ್ಗ 3ಎ ಯಡಿ ಮೀಸಲಾತಿಯನ್ನು ಪಡೆಯಬಹುದಾಗಿದೆ. ಆದರೆ. ಕಾಮಗಾರಿಗಳನ್ನು ಗುತ್ತಿಗೆ ಪಡೆಯಲು ತಮ್ಮ ಮಕ್ಕಳ್ ದಾಖಲಾತಿಗಳ ಮೇಲೆ 2ಎ ಮೀಸಲಾತಿ ಜಾತಿ ಪ್ರಮಾಣ ಪತ್ರ ಪಡೆದು ವಂಚನೆ ಮಾಡಿಕೊಳ್ಳಲಾಗಿದೆ. ಹಾಗೂ ಜಾತಿ ಪ್ರಮಾಣ ಪತ್ರ ನೀಡಿದ ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಪೊಲೀಸ್ ಠಾಣೆಯಲ್ಲಿ ಕ್ರಿಮಿನಲ್ ಪ್ರಕರಣ ದಾಖಲಿಸಿ ತನಿಖೆ ಕೈಗೊಳ್ಳಬೆಕೆಂದು ಈ ಮೂಲಕ ತಾಲೂಕ ಹಿಂದುಳಿದ ಜಾತಿಗಳ ಒಕ್ಕೂಟದ ಅಧ್ಯಕ್ಷ ಶರಣಗೌಡ ಸುಂಕೇಶ್ವರಹಾಳ, ಪ್ರಧಾನ ಕಾರ್ಯದರ್ಶಿ ನರಸಣ್ಣ ನಿಲವಂಜಿ, ಮುಖಂಡರಾದ ರಂಗಪ್ಪ ಮಡಿವಾಳ, ಬಲಭೀಮ ಹೂಗಾರ, ಮಲ್ಲಪ್ಪ ವಿಶ್ವಕರ್ಮ, ವಿಶ್ವಕರ್ಮ ಸಮಾಜದ ಅಧ್ಯಕ್ಷ ರಮೇಶ ಪತ್ತಾರ, ಚಿತ್ರಶೇಖರ ಮಲದಕಲ್, ಮಲ್ಲಿಕಾರ್ಜುನ ಕರಿಗಾರ ಗಬ್ಬೂರು, ಅಯ್ಯನಗೌಡ ದಿವಳಗುಡ್ಡ, ಸೇರಿದಂತೆ ವಿವಿಧ ಸಮಾಜದ ಮುಖಂಡರು ಉಪಸ್ಥಿತರಿದ್ದರು.

# ಜಿಲ್ಲೆಯಲ್ಲಿ 2.30 ಲಕ್ಷ ಹೆಕ್ಟರ್ ಪ್ರದೇಶ ನೀರಾವರಿಗೆ ಒಳಪಟ್ಟಿದ್ದರೂ ಕೂಡ ಕಾಲುವೆ ಜಾಲದ ರೈತರಗೋಳು ತಪ್ಪಿಲ್ಲ..!

### ಕೂಡಲೇ ಶಾಶ್ವತ ಪರಿಹಾರ ಕಲ್ಪಿಸಲು ಅರವಿಂದ ಕುಲಕರ್ಣಿ ಆಗ್ರಹ



ಕನ್ನಡ ಮಾತೃ ಭೂಮಿ ವಾರ್ತೆ

**ವಿಜಯಪುರ,ಏ.6**- ಸಕಾಲಕ್ಕೆ ಕ್ಲೋಜರ್ ಕಾಮಗಾರಿ ನಡೆಸಿ ಕಾಲುವೆ ಕೊನೆ ಭಾಗದ ರೈತರಿಗೆ ನೀರು ತಲುಪುವಂತೆ ಕ್ರಮಕೈಗೊಳ್ಳಲು ಒತ್ತಾಯಿಸಿ ಶನಿವಾರ ಅಖಂಡ ಕರ್ನಾ ಟಕ ರೈತ ಸಂಘ (ರಿ) ಪದಾಧಿಕಾರಿಗಳು ವಿಜಯಪುರ ಜಿಲ್ಲಾಧಿಕಾರಿ ಕಚೇರಿ ಸಿಬ್ಬಂದಿ ಮೂಲಕ ಕೆಬಿಜೆಎನ್‌ಎಲ್ ವ್ಯವ ಸ್ಥಾಪಕ ನಿರ್ದೇಶಕರಿಗೆ ಮನವಿ ಸಲ್ಲಿಸಿ ದರು.

ಈ ಸಂದರ್ಭದಲ್ಲಿ ಅಖಂಡ ಕರ್ನಾಟಕ ರೈತ ಸಂಘದ ರಾಜ್ಯ ಪ್ರಧಾನ ಕಾರ್ಯದರ್ಶಿ ಅರವಿಂದ ಕುಲಕರ್ಣಿ ಮಾತನಾಡಿ, ಲಾಲ್ ಬಹಾದ್ದೂರ್ ಶಾಸ್ತ್ರಿ ಜಲಾಶಯದ ವ್ಯಾಪ್ತಿಗೆ ಬರುವ ಎಲ್ಲ ಕಾಲುವೆಗಳಲ್ಲಿ ತುಂಬಿಕೊಂಡಿರುವ ಹೂಳು ಹಾಗೂ ಗಿಡಗಂಟಿಗಳನ್ನು ತೆರವುಗೊಳಿಸುವ ಕ್ಲೋಸರ್ ಕಾಮಗಾರಿಯನ್ನು ಸಕಾಲಕ್ಕೆ ಪ್ರಾರಂಭಿಸಿ ಸರಾಗವಾಗಿ ಕಾಲುವೆ ಜಾಲಕ್ಕೆ ನೀರು ಹರಿಸಿದಾಗ ಕಾಲುವೆ ಕೊನ ಅಂಚಿನವರೆಗೂ ನೀರು ತಲುಪುವಂತೆ ನೋಡಿಕೊಳ್ಳಬೇಕು. ಪ್ರತಿ ವರ್ಷ ಕ್ಲೋಸರ್ ಕಾಮಗಾರಿ ಸರಿಯಾಗಿ ಆಗುತ್ತಿಲ್ಲ. ಕಾಲುವೆಗೆ ನೀರು ಹರಿಸುವುದನ್ನು ಸ್ಥಗಿತಗೊಳಿಸುವ ಮುನ್ನವೇ ಟೆಂಡರ್ ಕರೆದು ಎಲ್ಲ ಸಿದ್ಧತೆಗಳನ್ನು ಮೊದಲೆ ತಯಾರಿ ಮಾಡಿಕೊಂಡಿರ ಬೇಕು. ಒಡೆದ ಕಾಲುವೆಗಳ ದುರಸ್ತಿ, ಕಾಲುವೆಗಳಲ್ಲಿ ತುಂಬಿದ ಹೂಳು, ಮುಳ್ಳು ಕಂಟಿಗಳ ತೆರವುಗೊಳಿಸುವುದು ಸೇರಿದಂತೆ ಕ್ಲೋಸರ್ ಕಾಮಗಾರಿಯಡಿ ನಡೆಯುತ್ತವೆ ಹಲವಾರು ವರ್ಷಗಳಿಂದ ಅನುದಾನ ಕೊರತೆಯಿಂದ ಕ್ಲೋಸರ್ ಕಾಮಗಾರಿಗೆ ಗ್ರಹಣ ಆವರಿಸಿತ್ತು ಕಳೆದ ವರ್ಷ ಕೆಲವು ಕಡೆ ಕಾಮಗಾರಿ ಮಾಡಿ ದ್ದರು.

ಆದರೆ ಅದು ಕೂಡ ಸರಿಯಾದ ರೀತಿಯಲ್ಲಿ ಆಗಲಿಲ್ಲ. ಆಲಮಟ್ಟಿ ಎಡದಂಡೆ ಕಾಲುವೆಯ 5ನೇ ವಿತರಣಾ ಕಾಲುವೆಯ 2ನೇ ಮತ್ತು 3ನೇ ಲ್ಯಾಟರಲ್ ಗಳನ್ನು ನಿರ್ಮಿಸಿದ ನಂತರ ಇಲ್ಲಿಯವರೆಗೂ ದುರಸ್ತಿ ಕೆಲಸ ಮಾಡಿಲ್ಲ ಇದರಿಂದ ಅಂದಾಜು ಸಾವಿರಾರು ರೈತರ ಜಮೀನುಗಳಿಗೆ ಸಕಾಲಕ್ಕೆ ನೀರು ದೊರೆತಿಲ್ಲ ಇದನ್ನು ಆ ಭಾಗದ ರೈತರು ಅಧಿಕಾರಿಗಳ ಗಮನಕ್ಕೆ ತಂದರೂ ಕೂಡ ಕ್ರಮ ಕೈಗೊಂಡಿಲ್ಲ.

ಲಾಲ್ ಬಹದ್ದೂರ್ ಶಾಸ್ತ್ರೀ ಜಲಾಶಯದ ನೀರಿನ ಮಟ್ಟ 519-60 ಮೀಟರ್ ಎತ್ತರದಲ್ಲಿ 123.081 ಟಿಎಂಸಿ ನೀರು ಸಂಗ್ರಹದ ಸಾಮರ್ಥ್ಯ ಇರುವ ಜಲಾಶಯ ಪ್ರತಿ ವರ್ಷ ಭರ್ತಿಯಾದರೂ ಕೂಡ ಜಿಲ್ಲೆಯ ರೈತರಿಗೆ ಕೇಳಿದ ಸಂದರ್ಭದಲ್ಲಿ ನೀರು ಕೊಡಲಾಗುತ್ತಿಲ್ಲ. ಜಿಲ್ಲೆಯಲ್ಲಿ 2.30 ಲಕ್ಷ ಹೆಕ್ಟರ್ ಪ್ರದೇಶ ನೀರಾವರಿಗೆ ಒಳಪಟ್ಟಿದ್ದರೂ ಕೂಡ ಕಾಲುವೆ ಜಾಲದ ರೈತರಗೋಳು ತಪ್ಪಿಲ್ಲ. ನಾನಾ ಕಾಲುವೆಗಳ ಬಹುತೇಕ ವಿತರಣಾ ಕಾಲುವೆಗಳಲ್ಲಿ ಅಪಾರ ಪ್ರಮಾಣದ ಹೂಳು, ಮುಳ್ಳು-ಕಂಟಿಗಳು ಬೆಳೆದಿವೆ. ನೀರು ಮುಂದೆ ಸಾಗದೆ ಇರುವುದರಿಂದ ಅಲ್ಲೇ ಶೇಖರಣೆಗೊಂಡು ರೈತರ ಜಮೀನುಗಳಿಗೆ ನುಗ್ಗಿ ಬಿತ್ತನೆ ಮಾಡಿದ ಎಲ್ಲ ಬೆಳೆಗಳು ನೀರಿನಲ್ಲಿ ಕೊಳೆತು ಹೋಗಿ ಸಾಕಷ್ಟು ಪ್ರಮಾಣ ಹಾನಿಯಾದ ಉದಾಹರಣೆಗಳಿವೆ. ಸಾಕಷ್ಟು ಹೂಳು ತುಂಬಿಕೊಂಡಿದೆ ಹೀಗಾಗಿ ಕಾಲುವೆಗಳ ಕೊನೆಯಂಚಿನ ಜಮೀನುಗಳಿಗೆ ನೀರು ಸರಾಗವಾಗಿ ಹರಿಯುತ್ತಿಲ್ಲ. ಇದರಿಂದ ಕಾಲುವೆ ನಿರ್ಮಿಸಿದ್ದರೂ ಪ್ರಯೋಜನ ವಿಲ್ಲದಂತಾಗಿದೆ. ಕಾಲುವೆ ಅಕ್ಕಪಕ್ಕದ ರಸ್ತೆಗಳು ಮುಳ್ಳುಕಂಟಿಗಳಿಂದ ಆವರಿಸಿದ್ದರಿಂದ ರೈತರು ಜಮೀನುಗಳಿಗೆ ಹೋಗಲು ಕೂಡ ಪರದಾಡುವಂತಾಗಿದೆ ಇದು ಪ್ರತಿ ವರ್ಷ ರೈತರಿಗೆ ದೊಡ್ಡ ಸವಾಲಾಗಿದೆ. ಆದ್ದರಿಂದ ಕಾಲುವೆಗಳಿಗೆ ನೀರು ಹರಿಸುವುದನ್ನು ಸ್ಥಗಿತಗೊಳಿಸಿ ತಕ್ಷಣ ಕ್ಲೋಸರ್ ಕಾಮಗಾರಿ ಕೈಗೆತ್ತಿಕೊಳ್ಳಬೇಕು ಆದರೆ ಅಧಿಕಾರಿಗಳು ತಡವಾಗಿ ಟೆಂಡರ್ ಕರೆದು ನೀರು ಹರಿಸುವ ಸಮಯದಲ್ಲಿ ಕಾಮಗಾರಿ ಆರಂಭಿಸುತ್ತಾರೆ ಇದರಿಂದ ಉದ್ದೇಶಿತ ಕ್ಲೋಸರ್ ಕಾಮಗಾರಿ ಪೂರ್ಣಗೊಳ್ಳುವುದಿಲ್ಲ. ಇದರಿಂದ ಕೋಟ್ಯಂತರ ಹಣ ಅನಾವಶ್ಯಕವಾಗಿ ಹಾಳಾಗಿ ಹೋಗುತ್ತಿವೆ. ಆದ ಕಾರಣ ಈ ಭಾರಿ ಕಾಲುವೆಗಳಿಗೆ ನೀರು ಕಾಲುವೆಗಳಿಗೆ ನೀರು ಹರಿಸುವುದನ್ನು ನಿಲ್ಲಿಸಿದ ತಕ್ಷಣ ಕಾಮಗಾರಿ ಪ್ರಾರಂಭಿಸಿ ಕಾಲುವೆ ಕೊನೆ ಅಂಚಿನವರೆಗೂ ನೀರು ತಲುಪುವಂತೆ ಕ್ರಮ ಕೈಗೊಳ್ಳಬೇಕೆಂದು ಆಗ್ರಹಿಸಿದರು.

ಈ ಸಂದರ್ಭದಲ್ಲಿ ಬಸವನ ಬಾಗೇವಾಡಿ ತಾಲೂಕಾಧ್ಯಕ್ಷ ಉಮೇಶ ವಾಲೀಕಾರ, ಜಿಲ್ಲಾ ಸಂಚಾಲಕ ಪಾಂಡು ಹ್ಯಾಟಿ, ಬಸವನ ಬಾಗೇವಾಡಿ ತಾಲೂಕಾ ಉಪಾಧ್ಯಕ್ಷ ಹೊನಕೇರೆಪ್ಪ ತೆಲಗಿ, ಸೋಮೇಶ ನಾಗರೆಡ್ಡಿ, ಮಲ್ಲನಗೌಡ ಮೇಟಿ, ಮಾಳಪ್ಪ ಪೂಜಾರಿ, ಲಂಕೇಶ ತಳವಾರ, ಸಂಗು ಚಲವಾದಿ, ಸಿದ್ದು ಹಿರೇಮಠ, ಮಲ್ಲಿಕಾರ್ಜುನ ಭಜಂತ್ರಿ, ಮಡಿವಾಳಪ್ಪ ನಾಗರೆಡ್ಡಿ, ಶ್ರೀಶೈಲ ಕುರಣದ, ವಿಠ್ಠಲ ಬಿರಾದಾರ ಸೇರಿ ದಂತೆ ಮುಂತಾದವರು ಉಪಸ್ಥಿತರಿ ದ್ದರು.

## ಇಂದು ಕಲಬುರ್ಗಿಯಲ್ಲಿ ಬಾಬು ಜಗಜೀವನರಾಮ್ ಜಯಂತ್ಯುತ್ಸವ: 119 ಸಾಧಕರಿಗೆ ಸನ್ಮಾನ

ಕನ್ನಡ ಮಾತೃ ಭೂಮಿ ವಾರ್ತೆ

**ಕಲಬುರ್ಗಿ,ಏ.6**-ನಗರದ ಡಾ. ಬಾಬು ಜಗಜೀವನರಾಮ್ ವೃತ್ತದಲ್ಲಿ ಏಪ್ರಿಲ್ 5ರಂದು ಸಂಜೆ 4 ಗಂಟೆಗೆ ಹಸಿರು ಕ್ರಾಂತಿಯ ಹರಿಕಾರ ಹಾಗೂ ಮಾಜಿ ಉಪ ಪ್ರಧಾನಿ ಡಾ. ಬಾಬು ಜಗಜೀವನರಾಮ್ ಅವರ ಜಯಂತ್ಯುತ್ಸವದ ನಿಮಿತ್ಯ ಬಹಿರಂಗ ಸಭೆ ಜರುಗಲಿದೆ.

ಸುಮಾರು 119 ಸಾಧಕರಿಗೆ ಸನ್ಮಾನ ಹಾಗೂ ನಿವೃತ್ತ ನೌಕರರಿಗೆ ಹಾಲಿ ನೌಕರರಿಗೆ ಸನ್ಮಾನ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ಸಮಾಜದ ಹಿರಿಯ ಮುಖಂಡ ಲಿಂಗರಾಜ್ ತಾರಫೈಲ್ ಅವರು ಹೇಳಿದರು.

ನಗರದ ಪತ್ರಿಕಾ ಭವನದಲ್ಲಿ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸಂಜೆ 5 ಗಂಟೆಗೆ ನಗರದ ಸರ್ದಾರ ವಲ್ಲಬಾಯಿ ಪಟೇಲ್ ವೃತ್ತದಿಂದ ಜಿಲ್ಲಾ ಜಯಂತ್ಯೋತ್ಸವ ಸಮಿತಿ ವತಿಯಿಂದ ಭವ್ಯ ಮೇರವಣಿಗೆ ಹಮ್ಮಿಕೊಂಡಿದೆ. ಆದ್ದರಿಂದ ನಗರದ ವಿವಿಧ ಬಡಾವಣೆಯ ಮತ್ತು ತಾಲ್ಲೂಕಿನ ಮಾದಿಗ ಸಮಾಜದ ಕುಲಬಾಂದವರು.

ಬುದ್ಧಿಜೀವಿಗಳು, ಪ್ರಗತಿಪರ ಚಿಂತಕರು, ಸರ್ಕಾರಿ ನೌಕರಸ್ಥರು, ನಿವೃತ್ತ ನೌಕರಸ್ಥರು. ನ್ಯಾಯವಾದಿಗಳು ಮತ್ತು ಮಹಿಳೆಯರು ಹಾಗೂ ವಿದ್ಯಾರ್ಥಿಗಳು ಸದರಿ ಕಾರ್ಯಕ್ರಮಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಕಾರ್ಯಕ್ರಮ ಯಶಸ್ವಿಗೊಳಿಸಬೇಕೆಂದು ಕೋರಿದರು.

ಸುದ್ದಿಗೋಷ್ಠಿಯಲ್ಲಿ ಜಯಂತ್ಯುತ್ಸವ ಸಮಿತಿಯ ಅಧ್ಯಕ್ಷ ಮಲ್ಲಿಕಾರ್ಜುನ್ ದೊಡ್ಡಮನಿ, ಪ್ರಚಾರ ಸಮಿತಿಯ ಅಧ್ಯಕ್ಷ ಸತೀಶ್ ಅಳ್ಳೊಳ್ಳಿ, ಶರಣು ಸಗರಕರ್, ರಾಜು ವಾಡೇಕರ್, ಪ್ರದೀಪ್ ಬಾಚನಳ್ಳಿ, ಮಾಜಿ ಉಪ ಮೇಯರ್ ಬಾಬು ಸುಂಠಾಣ್, ಪರಮೇಶ್ವರ್ ಖಾನಾಪೂರ್ ಮುಂತಾದವರು ಉಪಸ್ಥಿತರಿದ್ದರು.

### ಝುಳಕಿ(ಬಿ)ಯಲ್ಲಿ ಜಾತ್ರಾ ಮಹೋತ್ಸವ

## ಯುವಶಕ್ತಿ, ರೈತರು ರಾಷ್ಟ್ರದ ಬೆನ್ನಲುಬು-ಸಿದ್ದಪ್ಪ ಬಿದರಿ

ಕನ್ನಡ ಮಾತೃ ಭೂಮಿ ವಾರ್ತೆ

**ಆಳಂದ, ಏ.6**- ರೈತನಿಲ್ಲದ ದೇಶವೇ ಇಲ್ಲ ನೀವು ಬೆಳೆಯುವ ಒಂದು ಕಾಳು ಅನ್ನ ನಮ್ಮ ಜೀವನಾಡಿ ಎಂದು ಜನಪದ ತಜ್ಞ ಡಾ. ಸಿದ್ದಪ್ಪ ಬಿದರಿ ಅವರು ಹೇಳಿದರು.

ತಾಲ್ಲೂಕಿನ ಝುಳಕಿ (ಬಿ)ಗ್ರಾಮದ ಶ್ರೀ ಭೋಗೇಶ್ವರ ಜಾತ್ರಾ ಮಹೋತ್ಸವ ನಿಮಿತ್ಯ ಸಂಸ್ಕೃತಿಕ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ರೈತರ ಕಷ್ಟಗಳು ನನಗೆ ಗೊತ್ತಿದೆ ಮಳೆ ಕೊರತೆ, ಬೆಲೆ ಸಮಸ್ಯೆ, ಸಾಲದ ಒತ್ತಡ. ಇದಕ್ಕೆ ಪರಿಹಾರ ಒಂದೇ ನಾವು ಒಗ್ಗಟ್ಟಾಗಿ ನಿಂತರೆ ಮಾತ್ರ. ಸಹಕಾರ ಸಂಘಗಳು, ಹೊಸ ತಂತ್ರಜ್ಞಾನ, ಮತ್ತು ಸಮೂಹ ಶಕ್ತಿ ನಮ್ಮನ್ನು ಉಳಿಸುತ್ತದೆ ಎಂದರು.

ಯುವಕರೇ ರಾಷ್ಟ್ರದ ಶಕ್ತಿ,ನಿಮ್ಮ ಕೈಯಲ್ಲಿ ನಮ್ಮ ಭವಿಷ್ಯ ಇದೆ. ನೀವು ಓದಬೇಕು, ಬೆಳೆಯಬೇಕು ಆದರೆ ಹಡೆದ ತಾಯಿ-ತಂದೆ ಹಾಗೂ ಊರನ್ನು ಮರೆತರೆ ದೊಡ್ಡ ನಷ್ಟ. ನಗರಕ್ಕೆ ಹೋಗಿ ಕೆಲಸ ಮಾಡಬಹುದು, ಆದರೆ ನಿಮ್ಮ ಗ್ರಾಮಕ್ಕೆ



ಏನು ಕೊಟ್ಟಿದ್ದೀರಿ ಎಂಬುದನ್ನು ಯೋಚಿಸಿ. ಕೃಷಿಯಲ್ಲಿ ಹೊಸ ಪ್ರಯೋಗಗಳು ಮಾಡಿ, ಸ್ವಂತ ಉದ್ಯೋಗಗಳನ್ನು ಪ್ರಾರಂಭಿಸಿ, ನಿಮ್ಮ ಊರನ್ನು ಮಾದರಿ ಗ್ರಾಮವನ್ನಾಗಿ ಮಾಡಿ. ನಮ್ಮ ಸಂಸ್ಕೃತಿ ನಮ್ಮ ಹೆಮ್ಮೆ ಎಂದು ಅವರು ಹೇಳಿದರು.

ಹಾಸ್ಯ ಕಲಾವಿದ ಗುಂಡಣ್ಣ ಡಿಗ್ಗಿ ಅವರು ಮಾತನಾಡಿ, ಜಾತ್ರೆ ಕೇವಲ ಹಬ್ಬ ಅಲ್ಲ ಇದು ನಮ್ಮ ಐಕ್ಯತೆ, ಭಕ್ತಿ, ಹಾಗೂ ನಮ್ಮ ಜೀವನ ಶೈಲಿ. ನಾವು ಈ ಪರಂಪರೆಯನ್ನು ಕಾಪಾಡಬೇಕು, ಜೊತೆಗೆ ಹೊಸ ಆಲೋಚನೆಗಳನ್ನು ಸ್ವೀಕರಿಸಿ ಮುಂದುವರೆಯಬೇಕು. ಗ್ರಾಮೀಣ ಭಾಗದ ಜಾತ್ರೆ, ಉತ್ಸವಗಳು ಸರ್ವರ ಮನಸ್ಸನ್ನು ಒಂದು ಗುಡಿಸಿ ಸಮೃದ್ಧ ಸಮಾಜ ಕಟ್ಟುತ್ತದೆ ಎಂದು ಹೇಳುತ್ತಾ ಹಲವಾರು ಹಾಸ್ಯ ಚಟಾಕಿಗಳನ್ನು ಹೇಳಿ ನೆರೆದವರನ್ನು ರಂಜಿಸಿದರು.

ಮುಖ್ಯ ಅತಿಥಿಗಳಾಗಿ ಜನಪರ ಹೋರಾಟಗಾರ, ನ್ಯಾಯವಾದಿ ಹಣಮಂ ತರಾಯ ಅಟ್ಟೂರ್ ಅವರು ಆಗಮಿಸಿದ್ದರು.

ಜಾತ್ರಾ ಕಮಿಟಿಯ ಸರ್ವ ಸದಸ್ಯರು ಹಾಗೂ ಗ್ರಾಮದ ಹಿರಿಯರು, ಮಹಿಳೆಯರು, ಯುವಕರು ಸೇರಿದಂತೆ, ಸುತ್ತಮುತ್ತಲಿನ ಗ್ರಾಮದ ಅನೇಕ ಜನ ಭಾಗವಹಿಸಿದ್ದರು.

ಶುಕ್ರವಾರ ಸಾಯಂಕಾಲ ಶ್ರೀ ಭೋಗೇಶ್ವರ ಜಾತ್ರಾ ಮಹೋತ್ಸವ ನಿಮಿತ್ಯ ಭವ್ಯ ರಥೋತ್ಸವ ನಂತರ ವಿವಿಧ ಕಲಾವಿದರಿಂದ ಹಾಸ್ಯ ರಸಮಂಜರಿ ಕಾರ್ಯಕ್ರಮ ಜರುಗಿದವು.

## ನಿರ್ಮಾಣ ಹಂತದ ಕಟ್ಟಡದ ಸಜ್ಜಾದ ಮೇಲಿಂದ ಬಿದ್ದು ಕಾರ್ಮಿಕನ ಸಾವು

**ಕಲಬುರ್ಗಿ, ಏ.4**-ನಿರ್ಮಾಣ ಹಂತದ ಕಟ್ಟಡ ಕೆಲಸದಲ್ಲಿ ತೊಡಗಿದ್ದ ಕಾರ್ಮಿಕನೊಬ್ಬ ಸಜ್ಜಾದ ಮೇಲಿಂದ ಆಯತಪ್ಪಿ ಕೆಳಗೆ ಬಿದ್ದು ಮೃತಪಟ್ಟ ಘಟನೆ ನಗರದ ಜೇವರ್ಗಿ ಕ್ರಾಸ್ ಹತ್ತಿರ ಇರುವ ಕೆಎಸ್‌ಆರ್‌ಟಿಸಿ ಡಿಪೋ ಹತ್ತಿರದ ಪ್ರದೇಶದಲ್ಲಿ ಸಂಭವಿಸಿದೆ. ಮೃತನಿಗೆ ಮೂಲತ: ಆಳಂದ್ ತಾಲ್ಲೂಕಿನ ಕಡಗಂಚಿ ವಾಡಿಯ ನಿವಾಸಿ, ಹಾಲಿ ವಸ್ತಿ ಬಿದ್ದಾಪುರದ ಚಾಂದ್ ಪಾಷಾ ಎಂದು ಗುರುತಿಸಲಾಗಿದೆ. ಚಾಂದಾಪಾಷಾ ಸಜ್ಜಾದ ಮೇಲಿಂದ ಕೆಳಗೆ ಬಿದ್ದು ಗಾಯಗೊಂಡಾಗ ತಕ್ಷಣವೇ ಆತನಿಗೆ ಜಿಲ್ಲಾ ಸರ್ಕಾರಿ ಆಸ್ಪತ್ರೆಗೆ ಸೇರಿಸಲಾಯಿತು. ಆದಾಗ್ಯೂ, ವೈದ್ಯರು ಮೃತಪಟ್ಟಿರುವ ಕುರಿತು ಹೇಳಿದರು. ಈ ಕುರಿತು ಮೃತನ ಪತ್ನಿ ಪರವೀನ್‌ಬೇಗ ಗಂಡ ಚಾಂದಪಾಷಾ ಮುಲ್ಲಾ ಅವರು ದೂರು ಸಲ್ಲಿಸಿದ್ದು, ಸ್ಟೇಷನ್ ಬಜಾರ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ತನಿಖೆ ಮುಂದುವರೆದಿದೆ.

# 21ನೇ ಗುರು ಪಟ್ಟಾಧಿಕಾರ, ಜಗದ್ಗುರುಗಳ ಅಡ್ಡಪಲ್ಲಕ್ಕಿ ಮಹೋತ್ಸವ - ಗಜದಂಡ ಶ್ರೀ



ಕನ್ನಡ ಮಾತೃ ಭೂಮಿ ವಾರ್ತೆ

**ಮುದಗಲ್,ಏ.06-**ತಾಲೂಕಿನ ದೇವರ ಭೂಪರದ ಮರಗುಂಡ ತೋಪಿನ ಕಟ್ಟೆ ಸಂಸ್ಥಾನ ಬ್ರಹ್ಮನ್ಮಠದಲ್ಲಿ ಜುಲೈ 4 ರಿಂದ 24 ರ ವರೆಗೆ 21 ನೇ ಗುರು ಪಟ್ಟಾಧಿಕಾರ ಮಹೋತ್ಸವ ಹಾಗೂ ಸಿದ್ಧಾಂತ ಶಿಖಾ ಮಣಿ ಪ್ರವಚನ ಸೇರಿದಂತೆ ಹಲವು ಕಾರ್ಯಕ್ರಮಗಳು ಜರುಗಲಿದ್ದು ಭಕ್ತ ಗಣ ಭಾಗಿಯಾಗಿ ಯಶಸ್ವಿಗೊಳಿಸ ಬೇಕೆಂದು ತೋಪಿನಕಟ್ಟೆ ಸಂಸ್ಥಾನಮಠದ ಪೀಠಾಧಿಪತಿಗಳಾದ ಗಜದಂಡ ಶಿವಾಚಾ ರ್ಯರು ಹೇಳಿದರು.

ಮುದಗಲ್ ನ ನೀಲಕಂಠೇಶ್ವರ ದೇವಸ್ಥಾನದಲ್ಲಿ ರವಿವಾರ ನಡೆದ ಪೂರ್ವಭಾವಿ ಸಭೆಯನ್ನು ಉದ್ದೇಶಿಸಿಗಳು ಮಾತನಾಡಿ, ಲಿಂಗೈಕ್ಯ ಗಜದಂಡ ಶಿವಾಚಾರ್ಯರ 21ನೆಯ ಪುಣ್ಯಸ್ಮರಣೋತ್ಸವ ಹಾಗೂ ಅಭಿನವ ಗಜದಂಡ ಶಿವಾಚಾರ್ಯ 21ನೆಯ ಗುರು ಪಟ್ಟಾಧಿಕಾರ ಮಹೋತ್ಸವದ ತನ್ನಿಮಿತ್ಯ ಪಂಚಪೀಠಾಧೀಶ್ವರರ ಸಾನಿಧ್ಯದಲ್ಲಿ ಗುರುವಿರಕ್ತ ಆರೂಢರ ಸಂತ ಮಹಾಂತರ ಸಮ್ಮುಖದಲ್ಲಿ ಹಾಗೂ ನಾಡಿನ ಗಣ್ಯರು ಸೇವಾ ನಿರತ ಸದ್ಭಕ್ತರು ಅರ್ಚಕ ಪುರೋಹಿತರು ಮತ್ತು ಸಂಗೀತ ಸಾಹಿತ್ಯ ಕಲಾವಿದರ ಜೊತೆಗೂಡಿ ಸಮಾರಂಭವನ್ನು ಏರ್ಪಡಿಸಲಾಗಿದ್ದು 10 ದಿನಗಳ ಕಾಲ ಆರೂಢ ಪರಂಪರೆಯ ದಿಗ್ಗಜರಿಂದ ವೇದಾಂತ ಸಮ್ಮೇಳನ 11 ದಿನಗಳ ಕಾಲ ಕಾಶಿ ಜಗದ್ಗುರುಗಳಿಂದ ಪ್ರತಿದಿನ ಸಿದ್ಧಾಂತ ಶಿಖರಮಣಿ ಪ್ರವಚನ ಹಾಗೂ ಪ್ರತಿನಿತ್ಯ 101 ಜೋಡಿಗಳ ಮಹಾರುದ್ರ ಯಜ್ಞ ನೆರವೇರಿಸುವುದು 101 ಜಂಗಮ ಗಣಾರಾಧನೆ ಸೇರಿದಂತೆ ವಿವಿಧ ಕಾರ್ಯಕ್ರಮಗಳನ್ನು ಏರ್ಪಡಿಸಿದ್ದು ಲಿಂಗೈಕ್ಯ ಶ್ರೀಗಳ ಶಿಲಾಮೂರ್ತಿ ಪುನರ್ ಪ್ರತಿಷ್ಠಾಪನೆ ನಾಡಿನ ಪಂಚ ಪೀಠಾಧಿಶ್ವರರ ಅಡ್ಡಪಲ್ಲಕ್ಕಿ ಮಹೋತ್ಸವ ಜರಗಲಿದ್ದು ತಾಲೂಕಿನ ಜನತೆ ಹಾಗೂ ಅಮರೇಶ್ವರನ ದೇಗುಲದ ಭಕ್ತಾದಿಗಳು ಈ ಕಾರ್ಯಕ್ರಮದಲ್ಲಿ ಭಾಗಿಯಾಗಬೇಕೆಂದು ಭಕ್ತರಲ್ಲಿ ಮನವಿ ಮಾಡಿದರು.

ಪ್ರಮುಖರಾದ ಲಿಂಗಪ್ಪ ಹಣಗಿ ಕಾರ್ಯಕ್ರಮದ ಕುರಿತು ಪ್ರಾಸ್ತಾವಿಕವಾಗಿ ಮಾತನಾಡಿದರು.

ನಂತರ ಅಮರೇಶ್ವರ ದೇವಸ್ಥಾನದ ಪ್ರಧಾನ ಅರ್ಚಕ ಗಂಗಾಧರಯ್ಯ ಶಾಸ್ತ್ರಿಗಳು ಕಾರ್ಯಕ್ರಮದ ರೂಪರೇಷೆಗಳು ಬಗ್ಗೆ ವಿವರಿಸಿದರು.

ಈ ಸಂದರ್ಭದಲ್ಲಿ ಮುದಗಲ್ ಪಟ್ಟಣದ ಪ್ರಮುಖರಾದ ರಾಜು ಮಾಲಿಪಾಟೀಲ್, ಚಂದ್ರಣ್ಣ ಗಂಗಾವತಿ, ಮಹೇಶ್ ವಸ್ತದ, ಮಹಾಂತೇಶ್ ಪಾಟೀಲ್, ವೀರಭದ್ರಪ್ಪ ಕೊಳ್ಳಿ, ಬಸಪ್ಪ ಜೀಡಿ, ಗುಂಡಪ್ಪ ಗಂಗಾವತಿ, ಗುಂಡಪ್ಪ ಕಿಲ್ಲ, ಮಲ್ಲಪ್ಪ ಮಾಟೂರು ರಾಚಪ್ಪ ಗಬ್ಬೂರು, ಮಹಾಂತೇಶ ಅಕ್ಷತಿ, ವಿನೋದ್ ಕನ್ನಾಪುರಟ್ಟಿ, ಅಮರಗುಂಡಪ್ಪ ಗುಡಿಹಾಳ, ಭೀಮಣ್ಣ ಕುಂಬಾರ್, ಹಾಗೂ ಮುದುಗಲ್ ಪಟ್ಟಣದ ವಿವಿಧ ಸಮಾಜದ ಮುಖಂಡರುಗಳು, ಅರ್ಚಕರಾದ ನಿರುಪಾಧಿ, ಸಂಗಣ್ಣ ಹಾಗೂ ಸಮಾಜದ ಬಂಧುಗಳಿದ್ದರು.

# ಕಾಳಾಪುರ: ದ್ಯಾಮಮ್ಮ ದೇವಿ ದೇವಸ್ಥಾನ ಲೋಕಾರ್ಪಣೆ, ಸಾಮೂಹಿಕ ವಿವಾಹ ಕಾರ್ಯಕ್ರಮ

ಕನ್ನಡ ಮಾತೃ ಭೂಮಿ ವಾರ್ತೆ

**ಲಿಂಗಸುಗೂರ,ಏ.06-**ತಾಲೂಕಿನ ಕಾಳಾಪೂರ ಗ್ರಾಮ ದಲ್ಲಿ ನೂತನವಾಗಿ ನಿರ್ಮಾಣ ಮಾಡಿದ ಶ್ರೀ ದ್ಯಾಮಮ್ಮದೇವಿ ದೇವಸ್ಥಾನ ಲೋಕರ್ಪಣೆ ಹಾಗೂ ಸಾಮೂಹಿಕ ವಿವಾಹ ಕಾರ್ಯಕ್ರಮ ಜರುಗಿತು.

ವಿಧಾನಪರಿಷತ್ ಸದಸ್ಯ ಶರಣಗೌಡ ಪಾಟೀಲ್ ಬಯ್ಯಾಪೂರ ಹಾಗೂ ಆರ್ ಎಸ್ ನಾಡಗೌಡ್ ಉದ್ಘಾಟಿಸಿ ನೂತನ ವದು-ವರರಿಗೆ ಶುಭಹಾರೈಸಿದರು.

ದೇವಸ್ಥಾನವನ್ನು ಗ್ರಾಮಸ್ಥರು ಅತ್ಯಂತ ಆಕರ್ಷಣೆಯಾಗಿ ನಿರ್ಮಾಣ ಮಾಡಲಾಗಿದ್ದು, ಭಕ್ತರ ಬಹುದಿನಗಳ ಬೇಡಿಕೆ ಈಡೇರಿದಂತಾಗಿದೆ.

ಈ ಸಂದರ್ಭದಲ್ಲಿ ಲಿಂಗಸಗೂರು ನಗರ ಯೋಜನಾ ಪ್ರಾಧಿಕಾರದ ಅಧ್ಯಕ್ಷರಾದ ಭೂಪನಗೌಡ ಪಾಟೀಲ್ ಕರಡಕಲ್, ಶ್ರೀನಿವಾಸ್ ಅಮ್ಮಾಪೂರ, ಬಿ ಆರ್ ಮೇಟಿ, ಮುಖಂಡರಾದ



ಅಮರೇಶ ನಾಡಗೌಡ, ಬಸವರಾಜ ಬಸಾಪುರ್,ಶಶಿಧರ್ ಪಾಟೀಲ್, ಸೋಮಶೇಖರ ಐದನಾಳ, ಪ್ರಮೋದ್ ಕುಲಕರ್ಣಿ, ಶರಣಬಸವ ಗುಡದನಾಳ, ವಿಜಯ್ ಕುಮಾರ ಹೊಸಗೌಡ್ರು, ಚನ್ನಾರೆಡ್ಡಿ ಬಿರಾದರ್,ಹಾಗೂ ಊರಿನ ಹಿರಿಯರು ಮುಖಂಡರು ಹಾಗೂ ಸುತ್ತ ಮುತ್ತಲಿನ ಗ್ರಾಮಸ್ಥರು ಭಾಗವಹಿಸಿದ್ದರು.

# ಪ್ರತಿಭಾವಂತ ವಿದ್ಯಾರ್ಥಿಗಳನ್ನು ಗುರುತಿಸುವ ಕೆಲಸವನ್ನು ಶಿಕ್ಷಣ ಸಂಸ್ಥೆಗಳು ಮಾಡಬೇಕಾಗಿದೆ - ಗಿರಿಧರ ಪೂಜಾರ್




ಕನ್ನಡ ಮಾತೃ ಭೂಮಿ ವಾರ್ತೆ

**ಮಾನ್ವಿ,ಏ.06-**ಪಟ್ಟಣದ ನೇತಾಜಿ ಶಿಕ್ಷಣ ಸಂಸ್ಥೆ ಹಾಗೂ ನೇತಾಜಿ ಸೈನ್ಸ್ ಕಾಲೆಜು ವತಿ ಯಿಂದ ನಡೆದ ಪ್ರತಿಭಾನ್ವೇಶಣೆ ಕಾರ್ಯಕ್ರಮಕ್ಕೆ ಚಾಲನೆ ನೀಡಿ ರಾಜ್ಯ ಶಿಕ್ಷಣ ಕ್ಷೇತ್ರದ ಸಂಪನ್ಮೂಲ ವ್ಯಕ್ತಿಗಳಾದ ಗಿರಿಧರ ಪೂಜಾರ್ ಮಾತನಾಡಿ ನೇತಾಜಿ ಶಿಕ್ಷಣ ಸಂಸ್ಥೆಯು ಪ್ರತಿಭಾವಂತ ವಿದ್ಯಾರ್ಥಿಗಳನ್ನು ಗುರುತಿಸುವ ಮೂಲಕ ಅವರಲ್ಲಿರುವ ಪ್ರತಿಭೆಗೆ ಹೆಚ್ಚಿನ ಪ್ರೋತ್ಸಾಹ ದೊರೆಯಬೇಕು ಎನ್ನುವ ಉದ್ದೇಶದಿಂದ ಜಿಲ್ಲೆಯ ವಿವಿಧ ಭಾಗಗಳ ಪ್ರತಿಭಾವಂತ ವಿದ್ಯಾರ್ಥಿಗಳನ್ನು ಗುರುತಿಸಿ ಅವರಿಗೆ ಪ್ರತಿಭಾ ಪರೀಕ್ಷೆಯನ್ನು ನಡೆಸಿ ಉತ್ತಮ ಅಂಕಗಳನ್ನು ಪಡೆದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ತಮ್ಮ ಶಿಕ್ಷಣ ಸಂಸ್ಥೆಯಲ್ಲಿ ಅಧ್ಯಾಯನ ನಡೆಸುವುದಕ್ಕೆ ಉತ್ತಮ ಅವಕಾಶವನ್ನು ಒದಾಗಿಸುವುದರ ಜೋತೆಗೆ ಅವರಿಗೆ ಆಕರ್ಷಕವಾದ ನಗದು ಬಹುಮಾನಗಳನ್ನು ನೀಡುವ ಮೂಲಕ ಅವರ ಮುಂದಿನ ಶಿಕ್ಷಣಕ್ಕೆ ಅಗತ್ಯ ನೆರವು ನೀಡುತ್ತ ಬಂದಿದೆ ಎಂದು ತಿಳಿಸಿದರು.ನೇತಾಜಿ ಸೈನ್ಸ್ ಕಾಲೇಜಿನ ಆಡಳಿತಾಧಿಕಾರಿ ಡಾ. ಕೆ.ವಿನಯಾ ಮಾತನಾಡಿ ಕಲ್ಯಾಣ ಕರ್ನಾಟಕ ಭಾಗದಲ್ಲಿನ ವಿದ್ಯಾರ್ಥಿಗಳಿಗೆ ಉತ್ತಮ ಗುಣಮಟ್ಟದ ವಿದ್ಯಾಭ್ಯಾಸವನ್ನು ನೀಡುವ ಉದ್ದೇಶದಿಂದ ವಿಜ್ಞಾನ ವಿಭಾಗವನ್ನು ಪ್ರಾರಂಭಿಸಲಾಗಿದು ಕಾಲೇಜಿನಲ್ಲಿ ಸುಧಾರಿತ ವಿಜ್ಞಾನ ಪ್ರಯೋಗಲಾಯ ನುರಿತ ಉಪನ್ಯಾಸಕರು,ಸೇರಿದಂತೆ ಅಗತ್ಯ ಸೌಲಭ್ಯಗಳಿದ್ದು 10 ನೇ ತರಗತಿಯ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪ್ರೋತ್ಸಾಹವನ್ನು ನೀಡುವ ಉದ್ದೇಶದಿಂದ ಟ್ಯಾಲೆಂಟ್ ಹಂಟ್ ಪರೀಕ್ಷೆಯನ್ನು ಅಯೋಜಿಸಲಾಗಿದೆ ಎಂದು ತಿಳಿಸಿದರು.ಪ್ರತಿಭಾನ್ವೇಶಣೆ ಕಾರ್ಯಕ್ರಮದಲ್ಲಿ ಪ್ರೌಢಶಾಲೆಗಳ 1387 ವಿದ್ಯಾರ್ಥಿಗಳು ಭಾಗವಹಿಸಿದ್ದರು ಅವರಲ್ಲಿ ಪ್ರಥಮ ಸ್ಥಾನವನ್ನು ಪಡೆದ ಸುಪ್ರಿತಾ, ಐಶ್ವರ್ಯ ಪಾಟೀಲ್,ಸುಖದೇವ್, ರುಕ್ಮಿಣಿ,ಉರ್ಘೀರ್, ಟಿ.ಸಿದ್ದಾರ್ಥ, ಶ್ರೀನಿವಾಸ್, ಶಿವಮಣಿ, ಮನೋಜ್ ,ಸಿದ್ದೇಶ, ಚೇತನ್ ರವರಿಗೆ ನಗದು ಬಹುಮಾನಗಳ ಜೊತೆಗೆ ಉಚಿತ ಪ್ರವೇಶವನ್ನು ನೀಡುವುದಾಗಿ ಬರವಸೆ ನೀಡಲಾಯಿತು.

ಈ ಸಂದರ್ಭದಲ್ಲಿ ನೇತಾಜಿ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಕೆ.ಈ.ನರಸಿಂಹ, ಕಾರ್ಯದರ್ಶಿ ಕೆ,ವಿಜಯಲಕ್ಷ್ಮಿ, ಸಹಕಾರ್ಯದರ್ಶಿ ಕೆ.ರಾಜರವಿ ವರ್ಮಾ, ಪಕ್ಷಿಪ್ರೇಮಿ ಸಲ್ಲಾವುದ್ದೀನ್, ಆರೀಫ್, ಅನೀಸ್ ಫಾತಿಮಾ ಮೇಡಂ, ಬಸವರಾಜ್, ರಹಿಂಪಾಷಾ, ಸೇರಿದಂತೆ ಕಾಲೇಜಿನ ಉಪನ್ಯಾಸಕರು, ವಿದ್ಯಾರ್ಥಿಗಳು ಇದ್ದರು.

# ಮುದಗಲ್ ವಾರದ ಸಂತೆ ಹರಾಜು ಪ್ರಕ್ರಿಯೆ ರದ್ದುಪಡಿಸಲು ರೈತ ಸಂಘಟನೆ ಆಗ್ರಹ



ಕನ್ನಡ ಮಾತೃ ಭೂಮಿ ವಾರ್ತೆ

**ಲಿಂಗಸಗೂರು,ಏ.06-** ತಾಲೂಕಿನ ಮುದಗಲ್ ಪುರಸಭೆ ವ್ಯಾಪ್ತಿಯಲ್ಲಿ ಬರುವ ಮುದಗಲ್ ಪಟ್ಟಣದ ವಾರದ ಸಂತೆ ಹರಾಜಿನಿಂದ ರೈತರಿಗೆ ತುಂಬಾ ತೊಂದರೆಯಾಗುತ್ತಿದ್ದು ಕೂಡಲೇ ಹರಾಜು ಪ್ರಕ್ರಿಯೆಯನ್ನು ರದ್ದುಪಡಿಸುವಂತೆ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆಯ ಜಿಲ್ಲಾಧ್ಯಕ್ಷ ಶಿವಪುತ್ರ ಗೌಡ ನಂದಿಹಾಳ ಒತ್ತಾಯಿಸಿದರು.

ಪಟ್ಟಣದ ಪತ್ರಿಕಾ ಭವನದಲ್ಲಿ ಸುದ್ದಿಗೋಷ್ಠಿಯನ್ನು ಉದ್ದೇಶಿಸಿ ಮಾತನಾಡಿದ ಅವರು ಮೊದಲೇ ರೈತರು ಬೆಳೆದ ತರಕಾರಿಗಳಿಗೆ ಬೆಲೆ ಇಲ್ಲದಂತಾಗಿದ್ದು ಕಷ್ಟಪಟ್ಟು ಬೆಳೆದ ಅಲ್ಪಸ್ವಲ್ಪ ತರಕಾರಿಯನ್ನು ವಾರದ ಸಂತೆಗೆ ತಗೆದುಕೊಂಡು ಹೋಗಿ ಅಲ್ಲಿ ವ್ಯಾಪಾರಿಗಳು ಕೇಳಿದಷ್ಟು ಹಣಕ್ಕೆ ತರಕಾರಿ ನೀಡಿ ಬರಬೇಕಾದ ಪರಿಸ್ಥಿತಿ ನಿರ್ಮಾಣವಾಗಿ ರೈತ ಸಂಕಷ್ಟದ ಪರಿಸ್ಥಿತಿಯಲ್ಲಿ ತನ್ನ ಬದುಕನ್ನು ಸಾಗಿಸುತ್ತಿದ್ದು

ಈಗ ಮುದ ಗಲ್ ಪುರಸಭೆ ಆಡಳಿತ ವರ್ಗ ಇದ್ದಕ್ಕಿದ್ದ ಹಾಗೆ ವಾರದ ಸಂತೆ ಹರಾಜು ನಡೆಸಿದರೆ ರೈತ ಬೆಳೆದ ತರಕಾರಿ ಮಾರಾಟವಾದ ಹಣ ತರಕಾರಿ ಕೊಂಡೊಯ್ದ ವಾಹನದ ಬಾಡಿಗೆಗೆ ಟ್ಯಾಕ್ಷ ಕಟ್ಟಲು ಸರಿ ಹೋಗುತ್ತಿದೆ.

ಇಂತಹ ಪರಿಸ್ಥಿತಿಯಲ್ಲಿ ರೈತರು ಬೆಳೆದ ಬೆಳೆಗಳಿಗೆ ಬೆಲೆ ಇಲ್ಲದೆ ರೈತ ಕಂಗಾಲಾಗಿದ್ದು ರೈತನ ಬದುಕು ದುಸ್ಥಿತಿಯಲ್ಲಿದೆ. ಈಗ ರೈತನಿಂದ ಸಂತೆ ಕರ ವಸೂಲಿ ಮಾಡುತ್ತಿರುವುದು ನ್ಯಾಯ ಸಮ್ಮತವಲ್ಲ.

ಮುದುಗಲ್ ಪುರಸಭೆಗೆ ಬರಬೇಕಾದ ಆದಾಯ ಬಹಳಷ್ಟಿದ್ದು ಸುಮಾರು ವರ್ಷಗಳಿಂದ ಪಟ್ಟಣದಲ್ಲಿ ಪುರಸಭೆ ವ್ಯಾಪ್ತಿಗೆ ಪುರಸಭೆಯ ಆಸ್ತಿಗಳಾದ ಹಲವಾರು ವ್ಯಾಪಾರದ ಮಳಿಗೆಗಳು ಸುಮಾರು ವರ್ಷಗಳಿಂದ ವಹಿವಾಟು ನಡೆಸುತ್ತಿದ್ದರೂ ಅವರಿಂದ ಬಾಡಿಗೆ ವಸೂಲು ಮಾಡಿಲ್ಲ.

ರೈತರಿಗೆ ಅನುಕೂಲವಾಗುವ ರೀತಿಯಲ್ಲಿ ಸಂತೆ ಮೈದಾನದಲ್ಲಿ ಯಾವುದೇ ರೀತಿಯ ಮೂಲಭೂತ ಸೌಕರ್ಯಗಳನ್ನು ಸಹ ಒದಗಿಸದೆ ಅಲ್ಲಿಯ ಪುರಸಭೆ ನಿರ್ಲಕ್ಷ್ಯ ವಹಿಸಲಾಗಿದ್ದು ಸಂತೆಯಲ್ಲಿ ದುರ್ವಾಸನೆಯಿಂದ ವ್ಯಾಪಾರಿಗಳು ವ್ಯಾಪಾರ ಮಾಡುವ ಸ್ಥಿತಿ ನಿರ್ಮಾಣವಾಗಿದೆ.

ಕೂಡಲೇ ಪುರಸಭೆ ಅಧಿಕಾರಿಗಳು ಈಗ ಆದೇಶ ಹೊರಡಿಸಿರುವ ವಾರದ ಸಂತೆಯ ಸಾರ್ವಜನಿಕ ಹರಾಜು ಪ್ರಕಟಣೆ ಪ್ರಕ್ರಿಯೆಯನ್ನು ತಕ್ಷಣವೇ ರದ್ದುಪಡಿಸಬೇಕು

ಒಂದು ವೇಳೆ ನಮ್ಮ ಮನವಿಗೆ ಸ್ಪಂದಿಸದೆ ಹರಾಜು ಪ್ರಕ್ರಿ ಯೆಯನ್ನು ನಡೆಸಿದರೆ ರೈತ ಸಂಘಟನೆ ವತಿಯಿಂದ ಉಗ್ರವಾದ ಹೋರಾಟ ಹಮ್ಮಿಕೊಳ್ಳಲಾಗುವುದೆಂದು ಅವರು ಎಚ್ಚರಿಸಿದರು.

ಈ ಸಂದರ್ಭದಲ್ಲಿ ರೈತ ಸಂಘಟನೆಯ ಮುಖಂಡರಾದ ಹನುಮನಗೌಡ ಭೂಪುರ, ಲಕ್ಷ್ಮಣ ಮುಕ್ಕಣ್ಣನವರ, ಸೋಮರೆಡ್ಡಿ, ಹನುಮಂತಪ್ಪ ಜೂಲಗುಡ್ಡ, ವಿಜಯಕುಮಾರ್ ಸೇರಿದಂತೆ ಹಲವರು ಪತ್ರಿಕಾಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

# ಸಚಿವ ಪ್ರಿಯಾಂಕ್ ಖರ್ಗೆ ಇತಿಮಿತಿಯಲ್ಲಿ ಮಾತನಾಡಬೇಕು-ವಿಶ್ವೇಶ್ವರ ಹೆಗಡೆ ಕಾಗೇರಿ ಸಲಹೆ

ಕನ್ನಡ ಮಾತೃ ಭೂಮಿ ವಾರ್ತೆ

**ಕಲಬುರ್ಗಿ, ಏ.6-**ರಾಜ್ಯದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯಿತಿರಾಜ್ ಮತ್ತು ಐಟಿಬಿಟಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಪ್ರಿಯಾಂಕ್ ಖರ್ಗೆ ಅವರು ಇತಿಮಿತಿಯಲ್ಲಿ ಮಾತನಾಡಬೇಕು ಎಂದು ರಾಜ್ಯ ವಿಧಾನಸಭೆ ಮಾಜಿ ಅಧ್ಯಕ್ಷ ಹಾಗೂ ಸಂಸದ ವಿಶ್ವೇಶ್ವರ ಹೆಗಡೆ ಕಾಗೇರಿ ಅವರು ಸಲಹೆ ಮಾಡಿದರು.



ನಗರದಲ್ಲಿ ಶುಕ್ರವಾರ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ಒಂದು ದೇಶದ ಪರ ಭಾರತ ನಿಂತಿದ್ದಕ್ಕೆ ಸಮಸ್ಯೆ ಆಗಿದೆ ಎಂಬ ಪ್ರಿಯಾಂಕ್ ಖರ್ಗೆ ಹೇಳಿಕೆಯ ಕುರಿತು ತೀವ್ರ ಅಸಮಾಧಾನ ವ್ಯಕ್ತಪಡಿಸಿದರು.

ಸಚಿವ ಪ್ರಿಯಾಂಕ್ ಖರ್ಗೆ ಅವರು ಹಾಸಿಗೆ ಇದ್ದಷ್ಟು ಕಾಲು ಚಾಚಬೇಕು. ಮೋದಿ ಅವರಿಗೆ ಬೈಯ್ಯುವುದೇ ಅವರ ಕೆಲಸವಾಗಿದೆ. ಮೋದಿ ಹಾಗೂ ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಬಗ್ಗೆ ವಿವಾದದ ಮಾತೇ ಪ್ರಿಯಾಂಕ್ ಖರ್ಗೆ ಮಾತನಾಡುತ್ತಾರೆ. ಪ್ರಿಯಾಂಕ್ ಖರ್ಗೆ ಅವರಿಗೆ ನೀಡಿದ ಸಚಿವ ಸ್ಥಾನದ ಮೂರು ವರ್ಷಗಳ ಸಾಧನೆ ಬಗ್ಗೆ ಹೇಳಲ್ಲ. ಸರ್ಕಾರದ ಆಡಳಿತದ ಬಗ್ಗೆ ಹಾಗೂ ಸಾಧನೆ ಬಗ್ಗೆ ಮಾತನಾಡಲ್ಲ ಎಂದು ಅವರು ಆಕ್ರೋಶ ಹೊರಹಾಕಿದರು.

ಜೆಜೆಎಂ ಕಾಮಗಾರಿಗೆ ಹಲವು ಹಳ್ಳಿಗಳಲ್ಲಿ ನೀರಿಲ್ಲ, ರಸ್ತೆಗಳು ಹಾಳಾಗಿವೆ. ಪ್ರಿಯಾಂಕ್ ಖರ್ಗೆ ಅವರು ಅವರ ಇತಿಮಿತಿಯಲ್ಲಿ ಮಾತನಾಡಬೇಕು. ಜಿಲ್ಲೆಯಲ್ಲಿ ಕಾನೂನು ಸುವ್ಯವಸ್ಥೆ ಏನಾಗಿದೆ, ಅದರ ಬಗ್ಗೆ ಗಮನ ಕೊಡಲಿ ಎಂದು ಅವರು ತಿರುಗೇಟು ನೀಡಿದರು.

ಭಾರತದ ಜನ ನಿಜಕ್ಕೂ ಅದೃಷ್ಟವಂತರು. ಇರಾನ್-ಇಸ್ರೇಲ್ ಯುದ್ಧದ ಸಂದರ್ಭದಲ್ಲಿ ದೇಶಕ್ಕೆ ಸಮಸ್ಯೆಯಾಗಿಲ್ಲ. ಕೆಲವೆಡೆ ಸಿಲಿಂಡರ್ ಸಮಸ್ಯೆ ಆಗಿರಬಹುದು. ಅದು ಬಿಟ್ಟು ಯಾವ ಸಮಸ್ಯೆ ಆಗಿಲ್ಲ. ನರೇಂದ್ರ ಮೋದಿ ಅವರ 12 ವರ್ಷ ಆಡಳಿತದಿಂದ ನಾವು ಈ ಸಮಸ್ಯೆಗೆ ಪರಿಹಾರ ಕಂಡುಕೊಂಡಿದೆ. ಆಟೋ ಗ್ಯಾಸ್ ಹಾಗೂ ಕಮರ್ಷಿಯಲ್ ಗ್ಯಾಸ್ ಸಮಸ್ಯೆಯಾಗಿದೆ. ಆ ಸಮಸ್ಯೆ ಸಹ ಆದಷ್ಟು ಬೇಗ ಬಗೆಹರಿಯುತ್ತದೆ ಎಂದು ಅವರು ಇದೇ ಸಂದರ್ಭದಲ್ಲಿ ವಿಶ್ವಾಸ ವ್ಯಕ್ತಪಡಿಸಿದರು.

ದೇಶದ ಇತರೆ ರಾಷ್ಟ್ರಗಳ ಸಮಸ್ಯೆ ನೋಡಿದ್ರೆ, ನಮಗೆ ಅಷ್ಟು ಸಮಸ್ಯೆಯಾಗಿಲ್ಲ ಎಂದರು ನಮ್ಮ ರಾಜ್ಯದಲ್ಲಿ ಎರಡು ಉಪಚುನಾವಣೆ ನಡೆಯುತ್ತಿದೆ. ದಾವಣಗೆರೆ ಹಾಗೂ ಬಾಗಲಕೋಟೆ ಎರಡು ಕ್ಷೇತ್ರದಲ್ಲಿ ಜಯವಾಗುತ್ತದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರ ಆಡಳಿತಕ್ಕೆ ಜನ ರೋಸಿ ಹೋಗಿದ್ದಾರೆ. ಹೀಗಾಗಿ, ಎರಡು ಚುನಾವಣೆಯಲ್ಲಿ ಜನ ಪಾಠ ಕಲಿಸುತ್ತಾರೆ. ರಾಜ್ಯದಲ್ಲಿ ಯಾವುದೇ ಅಭಿವೃದ್ಧಿ ಕೆಲಸ ಆಗುತ್ತಿಲ್ಲ. ಮುಖ್ಯಮಂತ್ರಿ ಅವರಿಗೆ ಅವರ ಕುರ್ಚಿ ಚಿಂತೆ, ಉಪ ಮುಖ್ಯಮಂತ್ರಿ ಅವರಿಗೆ ಸಿಎಂ ಕುರ್ಚಿ ಚಿಂತೆಯಾಗಿದೆ. ಗ್ಯಾರಂಟಿ ಯೋಜನೆ ಸಹ ಜನರಿಗೆ ಸರಿಯಾಗಿ ಸಿಗುತ್ತಿಲ್ಲ ಎಂದು ಅವರು ಆರೋಪಿಸಿದರು. ಈ ಸಂದರ್ಭದಲ್ಲಿ ಬಿಜೆಪಿ ಜಿಲ್ಲಾ ಗ್ರಾಮಾಂತರ ಘಟಕದ ಅಧ್ಯಕ್ಷ ಅಶೋಕ್ ಬಗಲಿ, ನಗರಾಭಿವೃದ್ಧಿ ಪ್ರಾಧಿಕಾರದ ಮಾಜಿ ಅಧ್ಯಕ್ಷ ದಯಾಘನ್ ಧಾರವಾಡಕರ್ ಮುಂತಾದವರು ಉಪಸ್ಥಿತರಿದ್ದರು.

## ಇಂದಿನಿಂದ ಶೀಲವಂತ ಪ್ರೀಮಿಯರ್ ಲೀಗ್ ಕ್ರಿಕೆಟ್ ಟೂರ್ನಮೆಂಟ್

**ಬೀದರ್,ಏ.4-** ನಾಕೌಟ್ ಕ್ರಿಕೆಟ್ ಟೂರ್ನಮೆಂಟ್ ಅನ್ನು ಏಪ್ರಿಲ್ 5 ರಂದು ನಗರದ ನೆಹ ರು ಸ್ಟೇಡಿಯಂನಲ್ಲಿ ಶೀಲವಂತ ಸೇವಾ ಸಮಿತಿ ವತಿಯಿಂದ ಏರ್ಪಡಿಸ ಲಾಗಿದೆ ಎಂದು ಸಮಿತಿಯ ಅಧ್ಯಕ್ಷ ನಾಗರಾಜ್ ಕರಕ್ಯಾಳ್ ಹಾಗೂ ಉಪಾಧ್ಯಕ್ಷ ಉಮೇಶ್ ಕಾಡವಾದ್ ಅವರು ತಿಳಿಸಿದ್ದಾರೆ.

ಟೂರ್ನಮೆಂಟ್ ಬೆಳಿಗ್ಗೆ 8 ಗಂಟೆಗೆ ಆರಂಭವಾಗಿ ಸಂಜೆ 5:30ರವರೆಗೆ ಪಂದ್ಯಗಳು ನಡೆಯಲಿದ್ದು, ಬಳಿಕ ವಿಜೇತ ತಂಡಗಳಿಗೆ ಬಹುಮಾನ ವಿತರಣೆ ಕಾರ್ಯಕ್ರಮ ನಡೆಯಲಿದೆ. ವಿಜೇತ ತಂಡಗಳಲ್ಲಿ ಪ್ರಥಮ ಸ್ಥಾನ ಪಡೆದ ತಂಡಕ್ಕೆ 15,000 ರೂ. ಹಾಗೂ ರನ್ನರ್ ಅಪ್ ತಂಡಕ್ಕೆ 10,000 ರೂ. ನಗದು ಬಹುಮಾನ ನೀಡಲಾಗುತ್ತದೆ ಎಂದು ಅವರು ಮಾಹಿತಿ ನೀಡಿದ್ದಾರೆ.

ಸಮಾಜದ ಯುವಕರಲ್ಲಿ ಕ್ರೀಡಾ ಮನೋಭಾವ ಬೆಳೆಸುವುದು ಹಾಗೂ ಪರಸ್ಪರ ಒಗ್ಗಟ್ಟು ಹೆಚ್ಚಿಸುವ ಉದ್ದೇಶದಿಂ ದ ಟೂರ್ನಮೆಂಟ್ ಆಯೋಜಿಸಲಾಗಿದೆ. ಶೀಲವಂತ ಸಮಾಜದ ಯುವಕರು, ಸಮಾಜದ ಬಾಂಧವರು ಹಾಗೂಸಾರ್ವ ಜನಿ ಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಟೂ ರ್ನಮೆಂಟ್ ಕ್ರೀಡಾಕೂಟಯಶಸ್ವಿ ಗೊಳಿ ಸಬೇಕು ಎಂದು ಅವರು ಮನವಿ ಮಾಡಿದ್ದಾರೆ.

# ಪತ್ರಕರ್ತರ ರಾಜ್ಯ ಸಮ್ಮೇಳನ: ಏಪ್ರಿಲ್ 11ಕ್ಕೆ ಅದ್ದೂರಿ ಮೆರವಣಿಗೆ ಪತ್ರಕರ್ತರಿಗೆ ಗುರುದ್ವಾರ, ಖಾಸಗಿ ವಸತಿ ಗೃಹಗಳಲ್ಲಿ ವಸತಿ ವ್ಯವಸ್ಥೆ



ಕನ್ನಡ ಮಾತೃ ಭೂಮಿ ವಾರ್ತೆ

**ಬೀದರ್, ಏ.4-** ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ 40ನೇ ಪತ್ರಕರ್ತರ ರಾಜ್ಯ ಸಮ್ಮೇಳನದ ನಿಮಿತ್ಯ ಏಪ್ರಿಲ್ 11ರಂದು ನಗರದಲ್ಲಿ ಅದ್ದೂರಿ ಮೆರವಣಿಗೆ ನಡೆಸಲು ಸಮ್ಮೇಳನ ಮೆರವಣಿಗೆ ಸಮಿತಿ ನಿರ್ಧರಿಸಿದೆ. ನಗರದಲ್ಲಿ ಬುಧವಾರ ನಡೆದ ಸಮ್ಮೇಳನ ಮೆರವಣಿಗೆ ಸಮಿತಿಯ ಸಭೆಯಲ್ಲಿ ಈ ಕುರಿತು ತೀರ್ಮಾನ ಕೈಗೊಳ್ಳಲಾಯಿತು.

ಅಂದು ಬೆಳಿಗ್ಗೆ ನಗರದ ಬಸವೇಶ್ವರ ವೃತ್ತದಿಂದ ಭಗತ್‌ಸಿಂಗ್ ವೃತ್ತ, ಅಂಬೇಡ್ಕರ್ ವೃತ್ತ, ಸಿದ್ಧಾರ್ಥ ಕಾಲೇಜು ಮಾರ್ಗವಾಗಿ ಸಮ್ಮೇಳನ ಸ್ಥಳವಾದ ಝೀರಾ ಕನ್ವೆನ್ಷನ್ ಹಾಲ್‌ವರೆಗೆ ಮೆರವಣಿಗೆ ಜರುಗಲಿದೆ ಎಂದು ಸಮಿತಿಯ ಪ್ರಮುಖರು ತಿಳಿಸಿದರು. ಮೆರವಣಿಗೆಯಲ್ಲಿ ಅಲಂಕೃತ ರಥದಲ್ಲಿ ಸಮ್ಮೇಳನದ ಲೋಗೋ ಇರಲಿದೆ. ಬೀದರ್ ಸೇರಿ ವಿವಿಧ ಜಿಲ್ಲೆಗಳ ಕಲಾ ತಂಡಗಳು ಮೆರವಣಿಗೆಯ ವೈಭವ ಹೆಚ್ಚಿಸಲಿವೆ ಎಂದು ಹೇಳಿದರು.

ಮೆರವಣಿಗೆ ಮಾರ್ಗದಲ್ಲಿ ಸಂಘ ಸಂಸ್ಥೆಗಳು, ಪುಷ್ಪವೃಷ್ಟಿ ಮಾಡಿ ಮೆರವಣಿಗೆಯನ್ನು ಸ್ವಾಗತಿಸಿ ಬರಮಾಡಿಕೊಳ್ಳಲಿವೆ ಎಂದು ತಿಳಿಸಿದರು. ಕರ್ನಾಟಕ ಕಾರ್ಯನಿರತ ಪ್ರತಕರ್ತರ ಸಂಘದ ಜಿಲ್ಲಾ ಘಟಕದ ಅಧ್ಯಕ್ಷ ಆನಂದ್ ದೇವಪ್ಪ, ಜಿಲ್ಲಾ ಅಡಾಕ್ ಸಮಿತಿ ಸದಸ್ಯ ಅಪ್ಪಾರಾವ್ ಸೌದಿ, ಮೆರವಣಿಗೆ ಸಮಿತಿ ಪ್ರಧಾನ ಸಂಚಾಲಕ ಡಾ. ರಜನೀಶ್ ವಾಲಿ, ಸಂಚಾಲಕ ವಿಜಯಕುಮಾರ್ ಸೋನಾರೆ, ಸಹ ಸಂಚಾಲಕ ನಂದಕುಮಾರ್ ಕರಂಜೆ, ಸದಸ್ಯ ಸುನೀಲ್ ಭಾವಿಕಟ್ಟಿ ಮುಂತಾದವರು ಉಪಸ್ಥಿತರಿದ್ದರು.

ವಸತಿ ಸಮಿತಿ ಸಭೆ: ಸಮ್ಮೇಳನದಲ್ಲಿ ಪಾಲ್ಗೊಳ್ಳಲು ರಾಜ್ಯದ ವಿವಿಧೆಡೆಯಿಂದ ನಗರಕ್ಕೆ ಆಗಮಿಸುವ ಪತ್ರಕರ್ತರಿಗೆ ವಸತಿ ವ್ಯವಸ್ಥೆ ಮಾಡುವ ಕುರಿತು ನಗರದ ಪತ್ರಿಕಾ ಭವನದಲ್ಲಿ ಶುಕ್ರವಾರ ವಸತಿ ಸಮಿತಿ ಸಭೆ ನಡೆಯಿತು. ಹೊರ ಜಿಲ್ಲೆಗಳ ಪತ್ರಕರ್ತರ ವಾಸ್ತವ್ಯಕ್ಕೆ ನಗರದ ಗುರುದ್ವಾರದ

ವಸತಿ ಗೃಹಗಳು ಹಾಗೂ ಖಾಸಗಿ ವಸತಿ ಗೃಹಗಳಲ್ಲಿ ಈಗಾಗಲೇ ವ್ಯವಸ್ಥೆ ಮಾಡಲಾಗಿದೆ ಎಂದು ಸಮಿತಿ ಪ್ರಮುಖರು ಮಾಹಿತಿ ನೀಡಿದರು.

ಸಮ್ಮೇಳನಕ್ಕೆ ಬರುವ ಪತ್ರಕರ್ತರಿಗೆ ವಸತಿಗೆ ಯಾವುದೇ ತೊಂದರೆ ಆಗದಂತೆ ನೋಡಿಕೊಳ್ಳಬೇಕು ಎಂದು ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಜಿಲ್ಲಾ ಘಟಕದ ಅಧ್ಯಕ್ಷ ಆನಂದ ದೇವಪ್ಪ ತಿಳಿಸಿದರು.

ವಸತಿ ಸಮಿತಿಯ ಸಂಚಾಲಕ ಸಂತೋಷ್ ಚೆಟ್ಟಿ, ಸಹ ಸಂಚಾಲಕ ಶ್ರೀಕಾಂತ ಪಾಟೀಲ್, ರೇವಣಸಿದ್ದಪ್ಪ ಡಿ, ಪೃಥ್ವಿರಾಜ್, ಮಾಣಿಕೇಶ ಪಾಟೀಲ್, ಸಂಗಮೇಶ್ ಮೂಲಗೆ, ರಾಜಕುಮಾರ್ ಮಡಕಿ, ನಂದಕುಮಾರ್ ಕರಂಜೆ ಮುಂತಾದವರು ಉಪಸ್ಥಿತರಿದ್ದರು.

# ಪ್ರತಿಭಾ ಪುರಸ್ಕಾರ ಮಕ್ಕಳ ಕಲಿಕೆಗೆ ಸ್ಫೂರ್ತಿ ನೀಡುತ್ತದೆ-ಮಂಜುಳಾ

ಕನ್ನಡ ಮಾತೃ ಭೂಮಿ ವಾರ್ತೆ

**ಲಿಂಗಸುಗೂರು,ಏ.06-**ಟ್ಯಾಲೆಂಟ್ ಅವಾರ್ಡ್‌ಗಳಂತಹ ಪರೀಕ್ಷೆಗಳನ್ನು ಹಮ್ಮಿಕೊಳ್ಳುವುದರಿಂದ ಮಕ್ಕಳಿಗೆ ಜ್ಞಾನದ ಮಾರ್ಗ ತೋರಿಸಿದಂತಾಗುತ್ತಿದ್ದು ಜೊತೆಗೆ ಇಂತಹ ಪ್ರತಿಭಾ ಪುರಸ್ಕಾರ ಕಾರ್ಯಕ್ರಮಗಳು ಮಕ್ಕಳಲ್ಲಿ ಕಲಿಕಾ ಸ್ಫೂರ್ತಿಯನ್ನು ಉತ್ತೇಜಿಸಿದಂತಾ ಗುತ್ತದೆ ಎಂದು ಯರಡೋಣ ಸ. ಪ್ರೌಢ ಶಾಲೆಯ ಮುಖ್ಯ ಶಿಕ್ಷಕಿ ಮಂಜುಳಾ ಹೇಳಿದರು.

ಡಾ. ಸುಧಾಮೂರ್ತಿ ಇನ್ಫೋ ಪದವಿ ಪೂರ್ವ ಕಾಲೇಜು, ಲಿಂಗಸು ಗೂರು ಇವರು ಹಮ್ಮಿಕೊಳ್ಳಲಾಗಿದ್ದ ಸುಧಾ ಜೀನಿಯಸ್ ಹಂಟ್ 2026 ಪ್ರತಿಭಾ ಪುರಸ್ಕಾರ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು ವಿದ್ಯಾರ್ಥಿಗಳ ಭವಿಷ್ಯ ನಿರ್ಮಾಣದಲ್ಲಿ ಶಿಕ್ಷಣದ ಮಹತ್ವ, ಆಧುನಿಕ ಜೀವನಶೈಲಿ ಹಾಗೂ ಶಿಸ್ತುಬದ್ಧ ವಿದ್ಯಾಭ್ಯಾಸದ ಅಗ ತ್ಯತೆಯನ್ನು ವಿದ್ಯಾರ್ಥಿಗಳು ಮನವರಿಕೆ ಮಾಡಿಕೊಳ್ಳಬೇಕು. ಪಾಲಕರೂ ಸಹ ತಮ್ಮ ಮಕ್ಕಳ ನ್ನು ನಿರಂತರವಾಗಿ ಇಂತಹ ಪರೀಕ್ಷೆಗಳಲ್ಲಿ ಪಾಲ್ಗೊಳ್ಳಲು ಪ್ರೋತ್ಸಾಹಿಸಬೇಕು.

ನಿಮ್ಮ ಮಕ್ಕಳಲ್ಲಿ ಅಡಗಿರುವ ಪ್ರತಿಭೆಗಳು ಒಂದೇ ಬಾರಿಗೆ ಹೊರಬ ರಲು ಸಾಧ್ಯವಿಲ್ಲ ಶಿಕ್ಷಕರ ಮಾರ್ಗದರ್ಶ ನದಲ್ಲಿ ಹಂತ ಹಂತವಾಗಿ ನಿಮ್ಮ ಮಕ್ಕಳು ಎದೆಗುಂದದೆ ಇಂತಹ ಪರೀಕ್ಷೆಗಳಲ್ಲಿ ಪಾಲ್ಗೊಳ್ಳುವುದರಿಂದ ಮಾನಸಿಕ ಖಿನ್ನತೆ ಯಿಂದ ಹೊರಬಂದು ಜ್ಞಾನದ ಗುಣ ಮಟ್ಟವನ್ನು ಅರಿತುಕೊಂಡು ಮುಂ ದೊಂದು ದಿನ ಗುರಿ ತಲುಪಲು ಸಹಾಯಕವಾಗುತ್ತದೆ. ಮಕ್ಕಳ ಪ್ರತಿಭೆಗಳನ್ನು ಗುರುತಿಸಲು ಸದಾ ಅವಿರತ ಪ್ರಯತ್ನ ದಲ್ಲಿ ತೊಡಗಿರುವ ಡಾ.ಸುಧಾ ಮೂರ್ತಿ ಇನ್ಫೋ ಪದವಿ ಪೂರ್ವ ಕಾಲೇಜಿನ ಆಡಳಿತ ಮಂಡಳಿಗೂ ಹಾಗೂ ಸರ್ವಪ್ರಾಚಾರ್ಯರಿಗೂ ಅಭಿನಂದ ನೆಗಳು ಎಂದು ಹೇಳಿದರು.

ಅಡವಿಬಾವಿ ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆಯ ಮುಖ್ಯ ಗುರುಗಳಾದ ಅಮರೇಗೌಡ, ಇಂದಿರಾ ಗಾಂಧಿ ವಸತಿ ಶಾಲೆ, ಶಿಕ್ಷಕರಾದ ದುರಗಪ್ಪ, ಚಿತ್ರಕಲಾ ಶಿಕ್ಷಕ ಪರಶುರಾಮ್ ನಗನೂರ ಮಾತ ನಾಡಿ ವಿದ್ಯಾರ್ಥಿಗಳು ತಮ್ಮ ವಿದ್ಯಾರ್ಥಿ ಜೀವನದಲ್ಲಿ ಶಿಕ್ಷಣವೆಂಬ ಜ್ಞಾನದ ಕಡೆಗೆ ಹೆಚ್ಚು ಒತ್ತು ನೀಡಿ ಶಿಕ್ಷಕರ ಮಾರ್ಗದ ರ್ಶನದಡಿ ಸಾಗಿ ಕಲಿತ ಶಿಕ್ಷಣ ಸಂಸ್ಥೆಯ ಹಾಗೂ ಹೆತ್ತ ತಂದೆ ತಾಯಿಯರ ಕೀರ್ತಿ ತರುವಂತ ಪ್ರತಿಭೆಯ ನ್ನು ಹೊಂದುತ್ತಾ ಮುಂದುವರಿ ಯಬೇಕು ಎಂದು ಪ್ರೇರ ಣಾದಾಯಕ ಮಾತುಗಳನ್ನು ಹೇಳಿದರು. ಕಾರ್ಯಕ್ರಮದಲ್ಲಿ ಸಂಸ್ಥೆಯ ಕಾರ್ಯದರ್ಶಿಗಳಾದ ಆಂಜನೇಯ ಕಟ್ಟಿಮನಿ, ವಿಜ್ಞಾನ ವಿಭಾಗದ ಪ್ರಾಚಾ ರ್ಯರಾದ ಬಾಲಪ್ಪ ಹಿರೇಮನಿ, ಸುಭಾಷ್, ಬಸಲಿಂಗಪ್ಪ ಗುಡಿಮನಿ, ರಮೇಶ ವೆಂಕಟಾಪೂರ, ಸಂಯೋಜ ಕರಾದ ಜಮದಗ್ನಿ, ಸೇರಿದಂತೆ ಇನ್ನಿತರ ಗಣ್ಯರು ವೇದಿಕೆಯಲ್ಲಿ ಉಪಸ್ಥಿತರಿ ದ್ದರು. ಈ ಪ್ರತಿಭಾ ಪರೀಕ್ಷೆಯಲ್ಲಿ ಪ್ರಥಮ ಬಹುಮಾನವನ್ನು ಗುತ್ತಾ ವೆಂಕಟ ನಿರಾಜ ಎಂಬ ವಿದ್ಯಾರ್ಥಿ ಪಡೆದು ಕೊಂಡರು. ದ್ವಿತೀಯ ಬಹುಮಾನವನ್ನು ದರ್ಶನ್ ರಾಠೋ ಡ್ ಪಡೆದರು. ತೃತೀಯ ಬಹುಮಾನವನ್ನು ಪ್ರಿಯಾದರ್ಶಿನಿ ಎನ್ನುವ ವಿದ್ಯಾರ್ಥಿನಿ ಪಡೆದರು. ಇದಲ್ಲದೆ ಉತ್ತಮ ಸಾಧನೆ ಮಾಡಿದ 11 ವಿದ್ಯಾರ್ಥಿಗಳನ್ನು ಕಾರ್ಯಕ್ರಮದಲ್ಲಿ ಸನ್ಮಾನಿ ಸಲಾಯಿತು.ಪ್ರತಿ ಭಾ ಪುರಸ್ಕಾರ ಕಾರ್ಯಕ್ರ ಮದಲ್ಲಿ ನೂರಾರು ವಿದ್ಯಾರ್ಥಿಗಳು ಹಾಗೂ ಪಾಲಕರು ಪಾಲ್ಗೊಂಡಿ ದ್ದರು.

# ...ಮೊದಲನೇ ಪುಟದಿಂದ

## ಮಂಡ್ಯ : ಮಾಜಿ ಶಾಸಕ ಡಾ. ಅನ್ನದಾನಿ ಜೊತೆಗೆ ಪತ್ನಿಯ ಅಕ್ರಮ ಸಂಬಂಧ ಆರೋಪ, ಕುಮಾರಸ್ವಾಮಿ ಕಾಲಿಗೆ ಬಿದ್ದು ಪತಿಯ ಗೋಳಾಟ!

ಸಭೆ ನಡೆಯತಿತ್ತು. ಇಲ್ಲಿಗೆ ಬಂದ ಪ್ರಸನ್ನ ಕುಮಾರ್, ನನ್ನ ಹೆಂಡತಿ ಮತ್ತು ಮಾಜಿ ಶಾಸಕ ಅನ್ನದಾನಿ ನಡುವೆ ಕಳೆದ 10 ವರ್ಷಗಳಿಂದ ಅಕ್ರಮ ಸಂಬಂಧವಿದೆ. ಇದರಿಂದ ನನ್ನ ಸಂಸಾರ ಬೀದಿಗೆ ಬಂದಿದೆ. ನನಗೆ ನ್ಯಾಯ ಕೊಡಿಸಿ ಎಂದು ಕುಮಾರಸ್ವಾಮಿ ಕಾಲಿಗೆ ಬಿದ್ದು ಗೋಳಾಡಿದರು.

ಅನ್ನದಾನಿ, ನನ್ನ ಹೆಂಡತಿಗೆ ಮೈಸೂರಿನಲ್ಲಿ ಸುಮಾರು 1.5 ಕೋಟಿ ರೂಪಾಯಿ ಮೌಲ್ಯದ ಅಪಾರ್ಟ್‌ಮೆಂಟ್ ಕೊಡಿಸಿದ್ದಾರೆ ಎಂದು ಆರೋಪಿಸಿದರು. ಇದು ಸ್ಥಳದಲ್ಲಿದ್ದ ಅಧಿಕಾರಿಗಳು ಹಾಗೂ ಜನರಲ್ಲಿ ಅಚ್ಚರಿ ಮೂಡಿಸಿತು.

ನನ್ನ ಹೆಂಡತಿಯೊಂದಿಗೆ ಫೋನ್‌ನಲ್ಲಿ ಮಾತನಾಡು ತ್ತಾರೆ. ಈ ಬಗ್ಗೆ ಪ್ರಶ್ನೆ ಮಾಡಿದರೆ ಅನ್ನದಾನಿ ನನಗೆ ಹೆದರಿಸುತ್ತಿದ್ದಾರೆ. ನನ್ನ ಮೇಲೆ ಮಾನನಷ್ಟ ಮೊಕದ್ದಮೆ ಯನ್ನೂ ಹೂಡಿದ್ದಾರೆ. ನನ್ನ ಹೆಂಡತಿ ಅನ್ನದಾನಿ ಜೊತೆಯೇ ಇರಲಿ, ನನಗೆ ಅಭ್ಯಂತರವಿಲ್ಲ. ಆದರೆ ನನಗೆ ಆಕೆಯಿಂದ ವಿಚ್ಛೇದನ ಕೊಡಿಸಿ. ವಿಚ್ಛೇದನ ನೀಡಲು ಆಕೆ 30 ಲಕ್ಷ ರೂಪಾಯಿ ಹಣ ಕೇಳುತ್ತಿದ್ದಾಳೆ ಎಂದು ಪ್ರಸನ್ನ ಕಣ್ಣೀರಿಟ್ಟಿದ್ದಾರೆ. ನನ್ನ ಹೆಂಡತಿ ಇನ್ನೊಬ್ಬನ ಜೊತೆ ಇರುವುದನ್ನು ನಾನು ಹೇಗೆ ಸಹಿಸಿಕೊಳ್ಳಲಿ? ನನಗೆ ಆಕೆಯಿಂದ ಮುಕ್ತಿ ಕೊಡಿಸಿ, ನನಗೆ ನ್ಯಾಯ ಕೊಡಿಸಿ ಎಂದು ಬೇಡಿಕೊಂಡಿದ್ದಾರೆ. ದೂರು ಸ್ವೀಕರಿಸಿದ ಹೆಚ್.ಡಿ. ಕುಮಾರಸ್ವಾಮಿ, ಸಭೆ ಮುಗಿದ ಬಳಿಕ ಈ ಬಗ್ಗೆ ಮಾತನಾಡುತ್ತೇನೆ, ನ್ಯಾಯ ಕೊಡಿಸುತ್ತೇನೆ ಎಂದು ಭರವಸೆ ನೀಡಿದ್ದಾರೆ. ಸದ್ಯ ಮಂಡ್ಯದಲ್ಲಿ ಇದು ಭಾರಿ ಸಂಚಲನ ಮೂಡಿಸಿದ್ದು, ರಾಜಕೀಯ ವಲಯದಲ್ಲೂ ಚರ್ಚೆಗೆ ಕಾರಣವಾಗಿದೆ.

## ಮೂವರು ಮಕ್ಕಳು ಅನಾಥ-ಬೆಳಗಾವಿಯಲ್ಲಿ ಹೃದಯವಿದ್ರಾವಕ ಘಟನೆ

ಬಳಲುತ್ತಿದ್ದರು. ಇದರಿಂದ ಮನನೊಂದು ವಿಷ ಸೇವಿಸಿ ಆತ್ಮಹತ್ಯೆ ಮಾಡಿಕೊಂಡಿದ್ದರು. ತಕ್ಷಣ ಅವರನ್ನು ಬೈಲ ಹೊಂಗಲ ಸಾರ್ವಜನಿಕ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಆರೋಗ್ಯ ಸ್ಥಿತಿ ಗಂಭೀರವಾಗಿದ್ದರಿಂದ ಹೆಚ್ಚಿನ ಚಿಕಿತ್ಸೆಗಾಗಿ ಬೆಳಗಾವಿ ಜಿಲ್ಲಾಸ್ಪತ್ರೆಗೆ ರವಾನಿಸಲಾಗಿತ್ತು. ಆದರೆ, ಚಿಕಿತ್ಸೆ ಫಲಕಾರಿ ಆಗದೇ ಮಧುರಾ ಕೊನೆಯುಸಿರೆಳೆದಿದ್ದಾರೆ.

ಪತ್ನಿ ನೋಡಲು ಹೋಗುವಾಗ ಪತಿ ಸಾವು: ಇತ್ತ ಪತ್ನಿ ಆಸ್ಪತ್ರೆ ಸೇರಿದ ಸುದ್ದಿ ಕೇಳಿ ಬೆಳಗಾವಿಗೆ ತರಾತುರಿಯಲ್ಲಿ ಬರುತ್ತಿದ್ದ ಪತಿ ಕರೆಪ್ಪ ಅರವಳ್ಳಿ ಕ್ರಾಸ್ ಬಳಿ ರಸ್ತೆ ದಾಟುವಾಗ ಧಾರವಾಡದಿಂದ ವೇಗವಾಗಿ ಬರುತ್ತಿದ್ದ ಕೆಎಸ್‌ಆರ್‌ಟಿಸಿ ಬಸ್ ಡಿಕ್ಕಿ ಹೊಡೆದಿದೆ. ಘಟನೆಯಲ್ಲಿ ತೀವ್ರವಾಗಿ ಗಾಯಗೊಂಡಿದ್ದ ಕರೆಪ್ಪ ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಸ್ಥಳಕ್ಕೆ ಬೈಲಹೊಂಗಲ ಪೊಲೀಸರು ಭೇಟಿ ನೀಡಿ, ಪರಿಶೀಲನೆ ನಡೆಸಿದ್ದಾರೆ.

ಒಂದೇ ದಿನ ಪತಿ, ಪತ್ನಿ ಮೃತಪಟ್ಟಿರುವುದರಿಂದ ಅರವಳ್ಳಿ ಗ್ರಾಮದಲ್ಲಿ ಶೋಕ ವಾತಾವರಣ ನಿರ್ಮಾಣವಾಗಿದೆ. ಮಕ್ಕಳು ಹಾಗೂ ಕುಟುಂಬಸ್ಥರ ಆಕ್ರಂದನ ಮುಗಿಲು ಮುಟ್ಟಿದೆ. ಮಧುರಾ ಮತ್ತು ಕರೆಪ್ಪ ದಂಪತಿ ಮದುವೆ ಆಗಿ 9 ವರ್ಷ ಆಗಿತ್ತು. ಇವರಿಗೆ ಒಂದು ಹೆಣ್ಣು, ಎರಡು ಗಂಡು ಮಕ್ಕಳಿದ್ದಾರೆ. ಈಗ ಒಂದೇ ದಿನ ತಂದೆ-ತಾಯಿಯನ್ನು ಕಳೆದುಕೊಂಡು ಮೂವರು ಮಕ್ಕಳು ಅನಾಥರಾಗಿದ್ದಾರೆ. ದೇವರು ಈ ಕುಟುಂಬಕ್ಕೆ ಅನ್ಯಾಯ ಮಾಡಿದ ಅಂತಾ ಗ್ರಾಮಸ್ಥರು ಮಮ್ಮಲ ಮರಗುತ್ತಿದ್ದಾರ್. ಬೈಲಹೊಂಗಲ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಘಟನೆ ನಡೆದಿದೆ.

ಮಗುವಿನ ಸಾವಿನ ಬೆನ್ನಲ್ಲೇ ತಾಯಿ ಆತ್ಮಹತ್ಯೆ: ಇತ್ತೀಚೆಗೆ ಬೆಂಗಳೂರಿನ ಚಂದ್ರಾಲೇಔಟ್ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ 11 ತಿಂಗಳ ಗಂಡು ಮಗು ಬಕೆಟ್‌ನಲ್ಲಿ ಬಿದ್ದು ಸಾವನ್ನಪ್ಪಿತ್ತು. ಬಳಿಕ ಮಗ ಸಾವಿಗೆ ನಾನೇ ಕಾರಣ ಎಂದು ನೊಂದ ತಾಯಿಯೂ ಅದೇ ದಿನ ಆತ್ಮಹತ್ಯೆ ಮಾಡಿಕೊಂಡ ಘಟನೆ ನಡೆದಿತ್ತು.

ಮೃತ ತಾಯಿ ಪ್ರತಿಭಾ (29) ಖಾಸಗಿ ಕಂಪನಿಯೊಂದರಲ್ಲಿ ಸಾಫ್ಟ್‌ವೇರ್ ಇಂಜಿನಿಯರ್ ಆಗಿದ್ದು, ಮನೆಯಿಂದಲೇ ಕೆಲಸ ಮಾಡುತ್ತಿದ್ದರು. ಬೆಳಗಾವಿ ಮೂಲದ ಇವರ ಪತಿ ಮಹಾಂತೇಶ್ ಕೂಡ ಖಾಸಗಿ ಕಂಪನಿಯೊಂದರಲ್ಲಿ ಕೆಲಸ ಮಾಡುತ್ತಿದ್ದು, ಬೆಂಗಳೂರಲ್ಲಿ ವಾಸವಾಗಿದ್ದರು. ಅಂದು ಟೆರೇಸ್‌ನಲ್ಲಿ ಒಣಗಲು ಹಾಕಿದ್ದ ಬಟ್ಟೆ ತೆಗೆದುಕೊಳ್ಳಲು ಮಗುವನ್ನ ಬಿಟ್ಟು ಪ್ರತಿಭಾ ಹೋಗಿದ್ದರು. ಆಟವಾಡುತ್ತಿದ್ದ ಮಗು ಬಚ್ಚಲು ಮನೆಗೆ ಹೋಗಿ ನೀರಿದ್ದ ಬಕೆಟ್‌ನಲ್ಲಿ ಬಿದ್ದು ಮಗು ಸಾವನ್ನಪ್ಪಿತ್ತು. ಬಳಿಕ ತನ್ನ ನಿರ್ಲಕ್ಷ್ಯದಿಂದಾಗಿ ಮಗು ಸಾವನ್ನಪ್ಪಿದೆ ಎಂದು ಭಾವಿಸಿ ಪ್ರತಿಭಾ ಮನೆಯಲ್ಲಿ ಆತ್ಮಹತ್ಯೆಗೆ ಶರಣಾಗಿದ್ದರು.

## ಬಾಗಲಕೋಟೆ, ದಾವಣಗೆರೆಯಲ್ಲಿ ಬಿಜೆಪಿಗೆ ದೊಡ್ಡ ಅಂತರದ ಗೆಲುವು : ಆರ್.ಅಶೋಕ್

ಅಭಿವೃದ್ಧಿ ಮಾಡಿದ್ದರೆ ಜನರೇ ಹತ್ತಿರ ಬಂದು ನಿಮಗೆ ಓಟ್ ಹಾಕುತ್ತೇವೆ ಅಂತ ಹೇಳುತ್ತಿದ್ದರು. ಆದರೆ ಹಾಗೆ ಇಲ್ಲ ಎಂದರು. ಕಳೆದ ಮೂರು ವರ್ಷಗಳಿಂದ ರಾಜ್ಯದಲ್ಲಿ ಅಭಿವೃದ್ಧಿ ಏನೂ ಆಗಿಲ್ಲ. ಅಭಿವೃದ್ಧಿ ಶೂನ್ಯವಾಗಿದೆ. ಸಾಲಗಾರರ ರಾಜ್ಯವನ್ನಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಮಾಡಿದರು. ಅಭಿವೃದ್ಧಿ ಹೋಗಲಿ; ಗ್ಯಾರಂಟಿ ಸಹ ಸರಿಯಾಗಿ ಕೊಡಲಿಲ್ಲ. ಅನ್ನಭಾಗ್ಯವನ್ನು ಕನ್ನಭಾಗ್ಯ ಮಾಡಿದ್ದಾರೆ. ಕಾಂಗ್ರೆಸ್ ಅಭಿವೃದ್ಧಿ ವಿರೋಧಿ ಆಗಿರುವುದಿಂದ ಜನರೇ ಪಾಠ ಕಲಿಸಲಿದ್ದಾರೆ ಎಂದು ವಿಶ್ಲೇಷಿಸಿದರು. ಎರಡೂ ಕಡೆ ಕಾಂಗ್ರೆಸ್ ನವರೇ ಬಂದು ಒಳಗೊಳಗೆ ಬಿಜೆಪಿ ಪರ ಪ್ರಚಾರ ಮಾಡುತ್ತಿದ್ದಾರೆ. ದಾವಣಗೆರೆಯಲ್ಲಿ ಬಡವರನ್ನು ಗೆಲ್ಲಿಸಿ ಅಂತ ಸಿದ್ದರಾಮಯ್ಯ ಹೇಳಿದ್ದಾರೆ. ದಾವಣಗೆರೆಯ ಬಿಜೆಪಿ ಅಭ್ಯರ್ಥಿ ಬಡವರು. ಆದ್ದರಿಂದ ಸಿದ್ದರಾಮಯ್ಯ ಸಹ ನಮ್ಮ ಪರ ಪ್ರಚಾರ ಮಾಡಿದ್ದಾರೆ ಎಂದು ನುಡಿದರು.

## ಶಾಮನೂರು ಮಾಡಿರುವ ಕೆಲಸಗಳು ಮುಂದುವರೆಯಬೇಕೆಂದರೆ ಮೊಮ್ಮಗನನ್ನು ಗೆಲ್ಲಿಸಿ-ಸಿಎಂ

ಗೆಲ್ಲುವುದು ಅಷ್ಟೇ ಸತ್ಯ ಎಂದು ಸಿಎಂ ವಿಶ್ವಾಸ ವ್ಯಕ್ತಪಡಿಸಿದರು. ಮೋದಿಯವರು ಗ್ಯಾರಂಟಿ ಯೋಜನೆಗಳನ್ನು ಜಾರಿ ಮಾಡಲು ಸಾಧ್ಯ ಇಲ್ಲ ಎಂದರು. ಗ್ಯಾರಂಟಿ ಯೋಜನೆ ಜಾರಿ ಮಾಡಿದ್ವಿ. ಲಂಚ ಇಲ್ಲ, ಕಮಿಷನ್ ಇಲ್ಲದಂತೆ ಹಣವನ್ನು ಮಹಿಳೆಯರ ಖಾತೆಗೆ ಹಾಕುತ್ತಿದ್ದೇವೆ. ಮೋದಿಯವರು 2014 ರಲ್ಲಿ ಪಿಎಂ ಆದರು, ಆಗ ಅಚ್ಛೇ ದಿನ್ ಆಯೇಗಾ ಎಂದರು, ಬರಲಿಲ್ಲ. ನಿಮಗೆ ಒಳ್ಳೆ ದಿನ ಬಂತಾ. ಮೋದಿಯವರು ಬಂದಾಗ 414 ರೂಪಾಯಿ ಇತ್ತು ಸಿಲಿಂಡರ್ ಬೆಲೆ. ಇದೀಗ ಸಾವಿರ ರೂಪಾಯಿ ಆಗಿದೆ. ಪೆಟ್ರೋಲ್ 103, ಡಿಸೇಲ್ 90 ರೂಪಾಯಿಗೆ ಏರಿಕೆ ಆಗಿದೆ. ಸಿಲಿಂಡರ್ ಸಿಗ್ತಿಲ್ಲ. ಇದಕ್ಕೆ ಕೇಂದ್ರ ಸರ್ಕಾರ ಕಾರಣ. ದೇಶದಲ್ಲಿ ಕಪ್ಪು ಹಣ ಇದೆ, ಅದನ್ನು ತೆಗೆದುಕೊಂಡು ಬಂದು ಪ್ರತಿ ಕುಟುಂಬಕ್ಕೆ ಹಾಕ್ತೇವೆ ಎಂದರು, ಹದಿನೈದು ಪೈಸೆ ಕೂಡ ಹಾಕಿಲ್ಲ. ಪ್ರತಿ ವರ್ಷ ಎರಡು ಕೋಟಿ ಉದ್ಯೋಗ ಕೊಡ್ತಿವಿ ಎಂದರು, ಕೊಟ್ರಾ?. ಒಬ್ಬರಿಗೆ ಕೆಲಸ ಕೊಡಲಿಕ್ಕೆ ಆಗಲಿಲ್ಲ. ಗುಜರಾತ್‌ನ ಅಂಬಾನಿ, ಅದಾನಿಗೆ ಸಹಾಯ ಮಾಡ್ತಾ ಉದ್ಧಾರ ಮಾಡ್ತಿದ್ದಾರೆ ಎಂದು ಸಿಎಂ ದೂರಿದರು.

ಬಿಜೆಪಿಯವರು ಮಹಿಳೆಯರ, ಬಡವರ, ಕಾರ್ಮಿಕರ, ಅಲ್ಪಸಂಖ್ಯಾತರ ವಿರೋಧಿಗಳು. ಈ ಆಶೋಕ, ವಿಜಯೇಂದ್ರ ಹೇಳ್ತಿದ್ದಾರೆ ಗ್ಯಾರಂಟಿ ಯೋಜನೆ ನಿಲ್ಲಿಸುತ್ತಾರೆ ಅಂತ. ಗ್ಯಾರಂಟಿಗಳಿಗೆ ಒಂದು ವರ್ಷಕ್ಕೆ 52 ಸಾವಿರ ಕೋಟಿ ಹಣದ ಅವಶ್ಯಕತೆ ಇರೋದು. ಇಲ್ಲಿ ತನಕ 1 ಲಕ್ಷದ 31 ಸಾವಿರ ಕೋಟಿ ಗ್ಯಾರಂಟಿಗಳಿಗಾಗಿ ಖರ್ಚು ಮಾಡಿದ್ದೇವೆ. ಬಿಜೆಪಿಯವರು ಅಧಿಕಾರದಲ್ಲಿದ್ದಾಗ ಮನೆ ನಿರ್ಮಾಣಕ್ಕೆ ಹಣ ಇಟ್ಟಿಲ್ಲ. ಇವರು ಬಾಕಿ ಇಟ್ಟಿದ್ದ 24 ಸಾವಿರ ಕೋಟಿ ಸಾಲವನ್ನು ನಾವು ತೀರಿಸಿದ್ದೇವೆ. 56 ಸಾವಿರ ಉದ್ಯೋಗಗಳನ್ನು ಭರ್ತಿ ಮಾಡುತ್ತೇವೆ. ರಾಜ್ಯ ಆರ್ಥಿಕವಾಗಿ ದಿವಾಳಿ ಆಗಿದೆ ಅಂತಾ ಬಸವರಾಜ ಬೊಮ್ಮಾಯಿ ಹೇಳ್ತಿದ್ದಾರೆ. ದೇಶದ ಜಿಡಿಪಿ 7.4, ರಾಜ್ಯದ ಜಿಡಿಪಿ 8.1 ಇದೆ ಎಂದು ಸಿಎಂ ತಿರುಗೇಟು ನೀಡಿದರು.

ಬಿಜೆಪಿಯವರು ಜನರ ವಿರೋಧಿಗಳು, ಯಾವ ಆಧಾರದ ಮೇಲೆ ಮತ ಕೇಳ್ತಾರೆ - ಸಿಎಂ: ಮತ್ತೊಂದೆಡೆ, ನಗರದಲ್ಲಿಂದು ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ಬಿಜೆಪಿಯವರು ಸಂವಿಧಾನದ ವಿರೋಧಿಗಳು, ಜನರ ವಿರೋಧಿಗಳು. ಅವರು ಯಾವ ಆಧಾರದ ಮೇಲೆ ಮತ ಕೇಳ್ತಾರೆ, ಒಂಬತ್ತು ವರ್ಷ ಸರ್ಕಾರ ನಡೆಸಿದ್ದಾರೆ. ಕರ್ನಾಟಕದಲ್ಲಿ ಏನು ಮಾಡಿದ್ದಾರೆ ಎಂದು ಬಿಜೆಪಿ ನಾಯಕರ ವಿರುದ್ಧ ವಾಗ್ದಾಳಿ ನಡೆಸಿದರು.

ನಮ್ದು ಬಡವರ ಪರ ಪಕ್ಷ. ಬಿಜೆಪಿಯು ಧರ್ಮ, ಜಾತಿ ಹೆಸರಲ್ಲಿ ಸಮಾಜ ಒಡೆಯುವ ಪಕ್ಷ. ನಾಳೆ ಪ್ರಚಾರಕ್ಕೆ ಕೊನೆ ದಿನ. ಮನೆಮನೆಗೆ ಬಂದು ಮತ ಕೇಳಬಹುದು. ಇಲ್ಲಿ ಅಭ್ಯರ್ಥಿಗಳು ಮಾತ್ರ ಮತ ಕೇಳಬಹುದಾಗಿದ್. ಅಭ್ಯರ್ಥಿಗಳಲ್ಲದ ಬೇರೆ ಕ್ಷೇತ್ರದಿಂದ ಬಂದವರು ಇರುವಂತಿಲ್ಲ. ನಾವು ನೂರಕ್ಕೆ ನೂರು ಗೆಲ್ತಿವಿ. ಗ್ಯಾರಂಟಿ ಯೋಜನೆಗಳನ್ನು ಜನ ನಂಬಿದ್ದಾರೆ ಎಂದು ಹೇಳಿದರು. ಜೆಡಿಎಸ್ ಪಕ್ಷವನ್ನು ಯಾಕೆ ಸೋಲಿಸಿದ್ರು, ಚನ್ನಪಟ್ಟಣದಲ್ಲಿ ಸೋತಿದ್ದು ಯಾರು, ಕುಮಾರಸ್ವಾಮಿ ಗೆದ್ದಿದ್ದು, ಮಗ ಸೋತರಲ್ಲ. ನಮ್ಮ ಅಭ್ಯರ್ಥಿ 22 ಸಾವಿರ ಮತಗಳ ಅಂತರದಿಂದ ಗೆದ್ದರು ಎಂದ ಅವರು, ಕುಟುಂಬ ರಾಜಕಾರಣ ವಿಚಾರವಾಗಿ ಮಾತನಾಡಿ. ಅಪ್ಪ, ಮಕ್ಳು, ಮೊಮ್ಮಕ್ಕಳು, ಇಬ್ಬರು ಸೊಸೆಯಂದಿರು ಅವರ ಪಕ್ಷದಲ್ಲೇ ಇದ್ದಾರೆ. ಇದು ಕುಟುಂಬ ರಾಜಕಾರಣ ಅಲ್ವಾ?. ಜನ ಬಯಸಿದ್ರೆ ರಾಜಕಾರಣ ಮಾಡಲಿ. ತಿರಸ್ಕರಿಸಿದರೂ ರಾಜಕಾರಣ ಸರಿಯಲ್ಲ ಎಂದರು.

ದಾವಣಗೆರೆಗೆ ಪ್ರಚಾರಕ್ಕೆ ಬರಲು ವಸತಿ ಸಚಿವ ಜಮೀರ್ ಅಹ್ಮದ್‌ಗೆ ಸಮಯವಿಲ್ಲ. ಬಾಗಲಕೋಟೆಗೆ ಹೋಗಿದ್ದಾರೆ. ಬಾಗಲಕೋಟೆಯಲ್ಲಿ 42,000 ಮುಸ್ಲಿಂ ಮತಗಳಿವೆ. ಕೇರಳದಲ್ಲಿದ್ದ ಜಮೀರ್, ಇದೀಗ ಬಾಗಲಕೋಟೆ ಪ್ರಚಾರದಲ್ಲಿದ್ದಾರೆ ಎಂದು ಹೇಳಿದರು. ಅನ್ನರಾಮಯ್ಯ ಅಲ್ಲ ಕನ್ನರಾಮಯ್ಯ ಎಂಬ ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ ಹೇಳಿಕೆ ವಿಚಾರವಾಗಿ ಮಾತನಾಡಿ, ಬಿಜೆಪಿಗೆ ಅಪ್ಪಮಗ ಏನೆಲ್ಲ ಬಯ್ದಿದ್ದಾರೆಂದು ಹೇಳಬೇಕಾ?. ಇವರು ತಮ್ಮ ಅಸ್ತಿತ್ವ ಉಳಿಸಿಕೊಳ್ಳಲು ಬಿಜೆಪಿ ಸೇರಿದ್ದಾರೆ. ಜಾತ್ಯತೀತ ನಾಯಕನಾದ ನಾನು ಜಾತ್ಯತೀತ ಪಕ್ಷ ಸೇರಿದ್ದೇನೆ. ಜೆಡಿಎಸ್‌ನಲ್ಲಿ ನಾನು ರಾಜ್ಯಾಧ್ಯಕ್ಷನಾಗಿದ್ದಾಗ 59 ಸೀಟು ಗೆದ್ದಿದ್ದೆ. ಅಲ್ಲಿಂದ ಈವರೆಗೆ ಜೆಡಿಎಸ್ ಅಷ್ಟು ಸೀಟ್ ಗೆದ್ದಿದೆಯಾ?. ಪ್ರತಿವರ್ಷ ಜೆಡಿಎಸ್ ಸ್ಥಾನಗಳು ಕುಸಿಯುತ್ತಿವೆ ಎಂದರು. ಕರ್ನಾಟಕ ಕೈಗಾರಿಕಾ ವಲಯ ಕುಸಿಯುತ್ತಿದೆ ಎಂದ ಹೆಚ್‌ಡಿಕೆ ಆರೋಪ ವಿಚಾರವಾಗಿ ಮಾತನಾಡಿ, ಕೊಟ್ಟ ಕುದುರೆ ಏರದವ, ಧೀರನೂ ಅಲ್ಲ, ಶೂರನೂ ಅಲ್ಲ ಎಂದು ಸಿಎಂ ತಿರುಗೇಟು ನೀಡಿದರು.

## ದೀಪಾ ಆಯ್ಕೆ ಜನರಿಗೆ ಭದ್ರತೆ ಒದಗಿಸಲು ಪ್ರಾಮಾಣಿಕ ಪ್ರಯತ್ನದ ಭರವಸೆ

ನಂತರ ಹೆಚ್ಚುವರಿ ಪೊಲೀಸ್ ವರಿಷ್ಠಾಧಿ ಕಾರಿ ಜಿ.ಹರೀಶ ನೇಮಕಾತಿ ಆದೇಶ ನೀಡಿ ಶುಭ ಕೋರಿದರು. ಉತ್ತಮವಾಗಿ ಕಾರ್ಯ ನಿರ್ವಹಿಸುವಂತೆ ತಿಳಿಸಿದರು. ಈ ಸಂದರ್ಭದಲ್ಲಿ ಪ್ರಮುಖರಾದ ರವೀಂದ್ರನಾಥ ಪಟ್ಟಿ, ಮಲ್ಲೇಶ ಕೊಲಿಮಿ, ಸತ್ಯನಾರಾಯಣ, ವಿಶ್ವನಾಥ ಪಟ್ಟಿ, ಕೆ.ಇ.ಕುಮಾರ, ರಾಜು ಪಟ್ಟಿ, ಬಸವರಾಜ, ಭಾಸ್ಕರರಾಜ್, ಭೀಮಣ್ಣ ಮಂಚಾಲ, ಶೇಖರ ರಾಂಪೂರು, ಪ್ರಾಣೇಶಮಂಚಾಲ, ವಿನಯಕುಮಾರ,ಸೇರಿದಂತೆ, ಗೃಹ ರಕ್ಷಕ ದಳದ ಅಧಿಕಾರಿಗಳು, ಸಿಬ್ಬಂದಿ, ಸಮಾಜದ ಮುಖಂಡರು ಉಪಸ್ಥಿತರಿದ್ದರು.

# ಆಟೋ ಚಾಲಕರ ಸಂಘಗಳ ಪ್ರತಿನಿಧಿಗಳೊಂದಿಗೆ-ಮುನಿಯಪ್ಪ ಸಭೆ



**ಬೆಂಗಳೂರು,ಏ.6-**ಕರ್ನಾಟಕದಲ್ಲಿ ಆಟೋ ಎಲ್‌ಪಿಜಿ ಪೂರೈಕೆ ಸಮಸ್ಯೆಯನ್ನು ಪರಿಹರಿಸುವ ಉದ್ದೇಶದಿಂದ ಏಪ್ರಿಲ್ 10 ರಂದು ಸಭೆ ಕರೆಯುವುದಾಗಿ ಸಚಿವ ಕೆಎಚ್ ಮುನಿಯಪ್ಪ ಸೋಮವಾರ ಹೇಳಿದ್ದಾರೆ.

ಕೆಲವು ಖಾಸಗಿ ತೈಲ ಕಂಪನಿಗಳು ವಾಹನಗಳಿಗೆ ಎಲ್‌ಪಿಜಿ (ದ್ರವೀಕೃತ ಪೆಟ್ರೋಲಿಯಂ ಅನಿಲ) ಬೆಲೆಯನ್ನು ಹೆಚ್ಚಿಸಿವೆ. ಖಾಸಗಿ ಇಂಧನ ಕೇಂದ್ರಗಳಲ್ಲಿ ಬೆಲೆಗಳು ಹೆಚ್ಚಾದ ಕಾರಣ, ಹೆಚ್ಚಿನ ಜನರು ಇಂಧನ ತುಂಬಲು ಸಾರ್ವಜನಿಕ ವಲಯದ ಇಂಧನ ಕೇಂದ್ರಗಳಿಗೆ ಹೋಗುತ್ತಿದ್ದಾರೆ. ಇದರಿಂದಾಗಿ ಅಲ್ಲಿ ಸರತಿ ಸಾಲುಗಳು ಕಂಡುಬರುತ್ತವೆ ಎಂದು ಅವರು ಹೇಳಿದರು.

ಬೆಂಗಳೂರು ಮತ್ತು ರಾಜ್ಯದ ಇತರ ಹಲವಾರು ಸ್ಥಳಗಳಲ್ಲಿ ಆಟೋ ಎಲ್‌ಪಿಜಿ ಕೊರತೆಯಿಂದಾಗಿ ಆಟೋ ಸೇವೆಗಳಲ್ಲಿ ವ್ಯತ್ಯಯ ಉಂಟಾಗಿದೆ. ಹಲವು ಸ್ಥಳಗಳಲ್ಲಿ ಇಂಧನ ಕೇಂದ್ರಗಳ ಹೊರಗೆ ಆಟೋಗಳು ಸಾಲಿನಲ್ಲಿ ನಿಂತಿವೆ.

ಆಟೋ ಚಾಲಕರು ಸಂಕಷ್ಟದಲ್ಲಿದ್ದಾರೆಂದು ನಮಗೆ ತಿಳಿದಿದೆ. ಕೇಂದ್ರ ಸರ್ಕಾರವು ಪ್ರತಿದಿನ ಸುಮಾರು 3,000 ಆಟೋ ಎಲ್‌ಪಿಜಿ ಸಿಲಿಂಡರ್‌ಗಳನ್ನು ಪೂರೈಸುತ್ತಿದೆ. ಆದರೆ, ಖಾಸಗಿ ಪೂರೈಕೆದಾರರು ಬೆಲೆಯನ್ನು ಹೆಚ್ಚಿಸಿದ್ದಾರೆ. ಇದು ಆಟೋ ಚಾಲಕರಿಗೆ ಅನಾನುಕೂಲತೆಯನ್ನು ಉಂಟುಮಾಡುತ್ತಿದೆ. ಸಮಸ್ಯೆಯನ್ನು ಪರಿಹರಿಸಲು ನಾನು ತಕ್ಷಣ ಸಭೆ ಕರೆಯುತ್ತೇನೆಟಿ ಎಂದು ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕ ವ್ಯವಹಾರಗಳ ಖಾತೆಗಳನ್ನು ಹೊಂದಿರುವ ಮುನಿಯಪ್ಪ ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಟಿಸರ್ಕಾರ ಪ್ರತಿದಿನ ಸುಮಾರು 3,000 ಆಟೋ ಎಲ್‌ಪಿಜಿ ಸಿಲಿಂಡರ್‌ಗಳನ್ನು ಪೂರೈಸುತ್ತದೆ. ಖಾಸಗಿ ಕಂಪನಿಗಳು ಸಹ ಸಮಾನ ಸಂಖ್ಯೆಯ ಸಿಲಿಂಡರ್‌ಗಳನ್ನು ಪೂರೈಸುತ್ತವೆ. ಖಾಸಗಿ ಕಂಪನಿಗಳು ಬೆಲೆಗಳನ್ನು ಹೆಚ್ಚಿಸಿವೆ ಎಂದು ನನಗೆ ತಿಳಿದುಬಂದಿದೆ. ನಾನು ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ಮಾತನಾಡುತ್ತೇನೆಟಿ ಎಂದು ಹೇಳಿದರು.ಏಪ್ರಿಲ್ 10 ರಂದು ಸಭೆ ಕರೆದು ಸಮಸ್ಯೆಯನ್ನು ಪರಿಹರಿಸಲು ಪ್ರಯತ್ನಿಸುತ್ತೇನೆ. ಆಟೋ ಚಾಲಕರ ಜೀವನವು ಈ ಎಲ್‌ಪಿಜಿ ಸರಬರಾಜುಗಳನ್ನು ಅವಲಂಬಿಸಿದೆ. ಆದ್ದರಿಂದ ನಾನು ಆದ್ಯತೆಯ ಆಧಾರದ ಮೇಲೆ ಈ ಸಮಸ್ಯೆಯನ್ನು ಪರಿಹರಿಸಲು ಪ್ರಯತ್ನಿಸುತ್ತೇನೆಟಿ ಎಂದು ಅವರು ಹೇಳಿದರು. ಖಾಸಗಿ ಕಂಪನಿಗಳ ಪ್ರತಿನಿಧಿಗಳು, ಕೇಂದ್ರ ಸರ್ಕಾರಿ ಅಧಿಕಾರಿಗಳು, ಇಂಡಿಯನ್ ಆಯಿಲ್ ಕಾರ್ಪೊರೇಷನ್ ಸಂಯೋಜಕರು, ಪೊಲೀಸರು ಮತ್ತು ಹಿರಿಯ ರಾಜ್ಯ ಸರ್ಕಾರಿ ಅಧಿಕಾರಿಗಳನ್ನು ಸಹ ಸಭೆಗೆ ಕರೆಯಲಾಗುವುದು ಎಂದು ಹೇಳಿದರು.

ಅಧಿಕೃತ ಮೂಲಗಳ ಪ್ರಕಾರ, ಐಒಸಿ ಸೇರಿದಂತೆ ಪಿಎಸ್‌ಯು ನಿರ್ವಹಿಸುವ ಔಟ್‌ಲೆಟ್‌ಗಳು ಬೆಂಗಳೂರಿನಲ್ಲಿ ಆಟೋ ಎಲ್‌ಪಿಜಿಯನ್ನು ಲೀಟರ್‌ಗೆ ಸುಮಾರು ₹89.52 ಗಳಿಗೆ ಮಾರಾಟ ಮಾಡುತ್ತಿದ್ದರೆ, ಖಾಸಗಿ ಮಾರಾಟಗಾರರು ಲೀಟರ್‌ಗೆ ₹ 99 ರಿಂದ 105 ರ ನಡುವೆ ಮಾರಾಟ ಮಾಡುತ್ತಿದ್ದಾರೆ.

ಬೆಲೆಯಲ್ಲಿನ ಈ ವ್ಯತ್ಯಾಸವು ಗ್ರಾಹಕರು ಪಿಎಸ್‌ಯು ನಿರ್ವಹಿಸುವ ಆಟೋ ಎಲ್‌ಪಿಜಿ ವಿತರಣಾ ಕೇಂದ್ರಗಳ (ಎಎಲ್‌ಡಿಎಸ್) ಕಡೆಗೆ ಮುಖ ಮಾಡುವಂತೆ ಮಾಡಿದೆ. ಇದರ ಪರಿಣಾಮವಾಗಿ ಈ ಕೇಂದ್ರಗಳಲ್ಲಿ ಜನರ ಸಂಖ್ಯೆ ಹೆಚ್ಚಾಗಿದೆ ಮತ್ತು ಕಾಯುವ ಸಮಯ ಹೆಚ್ಚಾಗಿದೆ. ಪಶ್ಚಿಮ ಏಷ್ಯಾದಲ್ಲಿ ಯುದ್ಧ ನಡೆಯುತ್ತಿರುವುದರಿಂದ ಪರಿಸ್ಥಿತಿ ಗಂಭೀರವಾಗಿದೆ. ಹೀಗಾಗಿ, ಎಲ್ಲರ ಸಹಕಾರ ಅಗತ್ಯ ಎಂದು ಸಚಿವರು ಹೇಳಿದರು.ಟಿಇಂಧನ ಅಥವಾ ಇಂಧನ ಬಿಕ್ಕಟ್ಟು ಪ್ರಪಂಚದಾದ್ಯಂತ ಇದೆ. ಕೇಂದ್ರವು ರಷ್ಯಾದಿಂದ ಒಂದು ತಿಂಗಳ ಮುಂಚಿತವಾಗಿ ಇಂಧನ ಸರಬರಾಜುಗಳನ್ನು ಪಡೆಯಲು ಯೋಜಿಸಿದ್ದರೆ, ಈ ಪರಿಸ್ಥಿತಿ ಉದ್ಭವಿಸುತ್ತಿರಲಿಲ್ಲ. ಈಗ ಪರಿಸ್ಥಿತಿ ಹದಗೆಟ್ಟಿದೆ. ಈ ಸಮಸ್ಯೆಗಳನ್ನು ಪರಿಹರಿಸಲು ಪ್ರಯತ್ನಿಸೋಣ ಎಂದು ಅವರು ಹೇಳಿದರು.

# ಬೇಸಿಗೆ ದಟ್ಟಣೆ ನಿರ್ವಹಣೆ: ವಿಶೇಷ ರೈಲುಗಳ ಸಂಚಾರ ಅವಧಿ ವಿಸ್ತರಣೆ!

**ಬೆಂಗಳೂರು,ಏ.6-**ಬೇಸಿಗೆ ರಜೆಯ ಪ್ರಯುಕ್ತ ಪ್ರಯಾಣಿಕರ ಹೆಚ್ಚಿನ ದಟ್ಟಣೆಯನ್ನು ನಿಯಂತ್ರಿಸಲು ನೈಋತ್ಯ ರೈಲ್ವೆಯು ವಿಶೇಷ ರೈಲುಗಳ ಸಂಚಾರ ಅವಧಿಯನ್ನು ವಿಸ್ತರಿಸಿದೆ.

ಅದರಂತೆ, ಪ್ರತಿ ಸೋಮವಾರ ಹುಬ್ಬಳ್ಳಿಯಿಂದ ಹೊರಡುವ ರೈಲು ಸಂಖ್ಯೆ 07337 ಎಸ್‌ಎಸ್‌ಎಸ್ ಹುಬ್ಬಳ್ಳಿಗಾಜಿಪುರ ಸಿಟಿ ವೀಕ್ಲಿ ಎಕ್ಸ್‌ಪ್ರೆಸ್ ವಿಶೇಷ ರೈಲಿನ ಸೇವೆಯನ್ನು, ಈ ಹಿಂದೆ ಮಾರ್ಚ್ 30 ರವರೆಗೆ ಮಾತ್ರ ನಿಗದಿಪಡಿಸಲಾಗಿತ್ತು. ಈಗ ಇದನ್ನು ಏಪ್ರಿಲ್ 6 ರಿಂದ ಏಪ್ರಿಲ್ 27 ರವರೆಗೆ ಸಂಚರಿಸುವಂತೆ ವಿಸ್ತರಿಸಲಾಗಿದೆ.

ಪ್ರತಿ ಗುರುವಾರ ಗಾಜಿಪುರ ಸಿಟಿಯಿಂದ ಹೊರಡುವ ರೈಲು ಸಂಖ್ಯೆ 07338 ಗಾಜಿಪುರ ಸಿಟಿಎಸ್‌ಎಸ್‌ಎಸ್ ಹುಬ್ಬಳ್ಳಿ ವೀಕ್ಲಿ ಎಕ್ಸ್‌ಪ್ರೆಸ್ ವಿಶೇಷ ರೈಲಿನ ಸೇವೆಯನ್ನು ಈ ಹಿಂದೆ ಏಪ್ರಿಲ್ 2 ರವರೆಗೆ ನಿಗದಿಪಡಿಸಲಾಗಿತ್ತು. ಇದೀಗ ಈ ರೈಲು ಏಪ್ರಿಲ್ 9 ರಿಂದ ಏಪ್ರಿಲ್ 30 ರವರೆಗೆ ಸಂಚರಿಸಲಿದೆ. ಈ ಸೇವೆಗಳು ಎರಡೂ ದಿಕ್ಕುಗಳಲ್ಲಿ ತಲಾ ನಾಲ್ಕು ಟ್ರಿಪ್‌ಗಳನ್ನು ಪೂರೈಸಲಿವೆ.

ಇದೇ ರೀತಿ, ಪ್ರತಿ ಬುಧವಾರ ಹುಬ್ಬಳ್ಳಿಯಿಂದ ಹೊರಡುವ ರೈಲು ಸಂಖ್ಯೆ 07315 ಎಸ್‌ಎಸ್‌ಎಸ್ ಹುಬ್ಬಳ್ಳಿಮುಜಾಫರ್‌ಪುರ ವೀಕ್ಲಿ ಎಕ್ಸ್‌ಪ್ರೆಸ್ ವಿಶೇಷ ರೈಲಿನ ಸಂಚಾರವನ್ನು ಈ ಹಿಂದೆ ಏಪ್ರಿಲ್ 1 ರವರೆಗೆ ಸೂಚಿಸಲಾಗಿತ್ತು. ಇದೀಗ ಈ ರೈಲು ಏಪ್ರಿಲ್ 8 ರಿಂದ ಏಪ್ರಿಲ್ 29 ರವರೆಗೆ ಸಂಚರಿಸಲಿದೆ.

ಪ್ರತಿ ಶನಿವಾರ ಮುಜಾಫರ್‌ಪುರದಿಂದ ಹೊರಡುವ ರೈಲು ಸಂಖ್ಯೆ 07316 ಮುಜಾಫರ್‌ಪುರಎಸ್‌ಎಸ್‌ಎಸ್ ಹುಬ್ಬಳ್ಳಿ ವೀಕ್ಲಿ ಎಕ್ಸ್‌ಪ್ರೆಸ್ ವಿಶೇಷ ರೈಲು, ಈ ಹಿಂದೆ ಏಪ್ರಿಲ್ 4 ರವರೆಗೆ ನಿಗದಿಯಾಗಿತ್ತು. ಇದೀಗ ಈ ರೈಲು ಏಪ್ರಿಲ್ 11 ರಿಂದ ಮೇ 2 ರವರೆಗೆ ಸಂಚರಿಸಲಿದೆ. ಈ ರೈಲುಗಳು ಸಹ ಎರಡೂ ದಿಕ್ಕುಗಳಲ್ಲಿ ತಲಾ ನಾಲ್ಕು ಟ್ರಿಪ್‌ಗಳನ್ನು ನಡೆಸಲಿವೆ.

ಪ್ರತಿ ಬುಧವಾರ ಯಶವಂತಪುರದಿಂದ ಹೊರಡುವ ರೈಲು ಸಂಖ್ಯೆ 06543 ಯಶವಂತಪುರಬಿಕಾನೇರ್ ವೀಕ್ಲಿ ಎಕ್ಸ್‌ಪ್ರೆಸ್ ವಿಶೇಷ ರೈಲು, ಈ ಹಿಂದೆ ಮಾರ್ಚ್ 25 ರವರೆಗೆ ನಿಗದಿಯಾಗಿತ್ತು. ಇದನ್ನು ಏಪ್ರಿಲ್ 8 ರಿಂದ ಏಪ್ರಿಲ್ 29 ರವರೆಗೆ ವಿಸ್ತರಿಸಲಾಗಿದೆ.

ಮರಳಿ ಬರುವ ದಿಕ್ಕಿನಲ್ಲಿ, ಪ್ರತಿ ಶನಿವಾರ ಬಿಕಾನೇರ್‌ನಿಂದ ಹೊರಡುವ ರೈಲು ಸಂಖ್ಯೆ 06544 ಬಿಕಾನೇರ್ಯಶವಂತಪುರ ವೀಕ್ಲಿ ಎಕ್ಸ್‌ಪ್ರೆಸ್ ವಿಶೇಷ ರೈಲು, ಈ ಹಿಂದೆ ಮಾರ್ಚ್ 28 ರವರೆಗೆ ನಿಗದಿಯಾಗಿತ್ತು. ಇದೀಗ ಈ ರೈಲು ಏಪ್ರಿಲ್ 11 ರಿಂದ ಮೇ 2 ರವರೆಗೆ ಸಂಚರಿಸಲಿದೆ. ಈ ಸೇವೆಗಳು ಸಹ ತಲಾ ನಾಲ್ಕು ಟ್ರಿಪ್‌ಗಳನ್ನು ಪೂರೈಸಲಿವೆ.

ಈ ಎಲ್ಲಾ ವಿಶೇಷ ರೈಲುಗಳು ತಮ್ಮ ಅಸ್ತಿತ್ವದಲ್ಲಿರುವ ಮಾರ್ಗ, ವೇಳಾಪಟ್ಟಿ, ನಿಲ್ದಾಣಗಳು ಮತ್ತು ಸಂಚಾರದ ದಿನಗಳಲ್ಲೇ ಮುಂದುವರಿಯಲಿವೆ. ಈ ಅವಧಿ ವಿಸ್ತರಣೆಯು ಬೇಸಿಗೆಯ ಅವಧಿಯಲ್ಲಿ ಪ್ರಯಾಣಿಕರಿಗೆ ಹೆಚ್ಚಿನ ಸಾಮರ್ಥ್ಯ ಮತ್ತು ಸುಧಾರಿತ ಪ್ರಯಾಣದ ಅನುಕೂಲವನ್ನು ನೀಡುವ ನಿರೀಕ್ಷೆಯಿದೆ.

## ಚಿಕ್ಕಮಗಳೂರು: ಮುತ್ತೋಡಿ ಅಭಯಾರಣ್ಯದಲ್ಲಿ ದೈತ್ಯಾಕಾರದ ದಂತದ ಆನೆ ಪ್ರತ್ಯಕ್ಷ

**ಚಿಕ್ಕಮಗಳೂರು,ಏ.6-**ಕಾಫಿನಾಡಲ್ಲಿ ದೈತ್ಯ ದಂತದ ಕಾಡಾನೆ ಪ್ರತ್ಯಕ್ಷವಾಗಿದೆ. ಇಷ್ಟು ದೊಡ್ಡದಾದ ದಂತವನ್ನು ಹೊಂದಿರುವ ಕಾಡಾನೆಯನ್ನು ನೋಡಿ ಪ್ರವಾಸಿಗರು ಹಾಗೂ ಚಿಕ್ಕಮಗಳೂರು ಜಿಲ್ಲೆಯ ಜನತೆ ಆಶ್ಚರ್ಯ ವ್ಯಕ್ತಪಡಿಸಿದ್ದಾರೆ.

ಚಿಕ್ಕಮಗಳೂರು ಜಿಲ್ಲೆಯ ಮುತ್ತೋಡಿ ಅಭಯಾರಣ್ಯದಲ್ಲಿ ನೂರಾರು ಕಾಡಾನೆಗಳಿವೆ. ಒಂದೊಂದು ಕಾಡಾನೆಯೂ ವಿಶಿಷ್ಟ ರೀತಿಯಲ್ಲಿ ತನ್ನ ಚಲನ ವಲನಗಳ ಮೂಲಕ ಅರಣ್ಯ ಸಿಬ್ಬಂದಿಗಳ ಕಣ್ಣಿಗೆ ಕಾಣಿಸಿಕೊಳ್ಳುತ್ತವೆ. ಇದೊಂದು ಆನೆ ಪದೇ ಪದೆ ಮುತ್ತೋಡಿ ಅಭಯಾರಣ್ಯದ ಮಧ್ಯೆ ಇರುವ ಬ್ರಿಟಿಷರ ಕಾಲದಲ್ಲಿ ನಿರ್ಮಾಣವಾದ ಕೆಸವೆ ಬಳಿ ಇರುವ ಅರಣ್ಯ ವಿಶ್ರಾಂತಿ ಗೃಹದ ಬಳಿ ಪದೇ ಪದೆ ಕಾಣಿಸಿಕೊಳ್ಳುತ್ತಿದೆ. ಅರಣ್ಯ ವಿಶ್ರಾಂತಿ ಗೃಹದ ಪಕ್ಕದಲ್ಲಿನ ಹಲಸಿನ ಹಣ್ಣಿನ ಮರವಿದ್ದು, ಹಲಸಿನ ಹಣ್ಣು ತಿನ್ನಲು ಪದೇಪದೇ ಈ ಭಾಗಕ್ಕೆ ಆನೆ ಬರುತ್ತಿದೆ ಎಂದು ತಿಳಿದುಬಂದಿದೆ.

ಈ ಕುರಿತು ಪರಿಸರ ತಜ್ಞ ವೀರೇಶ್ ಈಟಿವಿ ಭಾರತಕ್ಕೆ ಪ್ರತಿಕ್ರಿಯೆ ನೀಡಿದ್ದು, ಈ ಆನೆ ಸುಮಾರು 40 ರಿಂದ 45 ವರ್ಷದ ಕಾಡಾನೆಯಾಗಿದ್ದು, ದಷ್ಟ ಪುಷ್ಟವಾಗಿ ಬೆಳೆದಿದೆ. ಸುಮಾರು 4,500 ರಿಂದ 5,000 ಕೆಜಿ ವರೆಗೂ ಈ ಆನೆ ತೂಗಬಲ್ಲದು. ಭದ್ರಾ ಅಭಯಾರಣ್ಯದಲ್ಲಿ ಸಮೃದ್ಧವಾಗಿ ಆಹಾರ ಹಾಗೂ ನೀರು ಸಿಗುವ ಹಿನ್ನೆಲೆ, ದಂತಗಳು ಉದ್ದವಾಗಿ ಬೆಳೆಯುತ್ತವೆ. ಹಾಗೂ ಕಾಡಾನೆಗಳು ದಷ್ಟ-ಪುಷ್ಟವಾಗಿ ಬೆಳೆಯುತ್ತವೆ. ಅದೇ ರೀತಿ ಬೇರೆ ಜಿಲ್ಲೆಗಳಿಗೆ ಹೋಲಿಸಿಕೊಂಡು ನೋಡಿದರೆ ಅಲ್ಲಿನ ಆನೆಗಳ ದಂತಗಳು ಇಷ್ಟು ದಷ್ಟ ಪುಷ್ಟವಾಗಿ ಬೆಳೆದಿರುವುದಿಲ್ಲ. ಭದ್ರಾ ಅಭಯಾರಣ್ಯದಲ್ಲಿ ಮಾತ್ರ ಈ ರೀತಿಯ ಲಕ್ಷಣ ಇರುವ ಕಾಡಾನೆಗಳನ್ನು ನೋಡಬಹುದು. ನೋಡಲು ಎತ್ತರವಾದ ಹಾಗೂ ದಂತಗಳು ಉದ್ದವಾಗಿರುವಂತಹ ಕಾಡಾನೆಗಳು ಇಲ್ಲಿ ನೋಡ ಸಿಗುವುದು ಸರ್ವೇ ಸಾಮಾನ್ಯವಾಗಿದೆ ಎಂದು ಪ್ರತಿಕ್ರಿಯೆ ನೀಡಿದರು.

ಇನ್ನು ಕಾಫಿನಾಡಿನ ಮಲೆನಾಡು ಭಾಗದಲ್ಲಿ ಕಾಡಾನೆಗಳ ಹಾವಳಿ ದಿನೇ ದಿನೆ ಹೆಚ್ಚಾಗುತ್ತಿದ್ದು, ಸ್ಥಳೀಯ ನಿವಾಸಿಗಳು ತೀವ್ರ ಭೀತಿಯಲ್ಲಿ ಬದುಕುವಂತಾಗಿದೆ. ನಿರಂತರವಾಗಿ ಜಮೀನುಗಳಿಗೆ ನುಗ್ಗುತ್ತಿರುವ ಆನೆಗಳು, ರೈತರು ಕಷ್ಟಪಟ್ಟು ಬೆಳೆದ ಅಪಾರ ಪ್ರಮಾಣದ ಬೆಳೆಗಳನ್ನು ನಾಶಪಡಿಸುತ್ತಿವೆ. ಈ ಆತಂಕದ ನಡುವೆಯೇ, ಮುತ್ತೋಡಿ ಅಭಯಾರಣ್ಯದ ಸಮೀಪವಿರುವ ಕೆಸವೆ ಬಳಿ ಅರಣ್ಯದ ವ್ಯಾಪ್ತಿಯೊಳಗೆ ದೈತ್ಯಾಕಾರದ ಕಾಡಾನೆಯೊಂದು ಪ್ರತ್ಯಕ್ಷವಾಗಿರೋದು ಪ್ರವಾಸಿಗರಲ್ಲಿ ಒಂದು ಕಡೆ ಸಂತಸ ಮೂಡಿಸಿದೆ.

ಆಹಾರ ಮತ್ತು ನೀರಿನ ಹುಡುಕಾಟದಲ್ಲಿ ಈ ದೈತ್ಯ ಆನೆ ಕಾಣಿಸಿಕೊಂಡಿದೆ. ಗಮನಾರ್ಹವಾದ ದೊಡ್ಡ ದಂತಗಳನ್ನು ಹೊಂದಿರುವ ಈ ಆನೆಯು ಓಡಾಡುತ್ತಿರುವ ದೃಶ್ಯವನ್ನು ಸ್ಥಳೀಯರು ತಮ್ಮ ಮೊಬೈಲ್ ಫೋನ್‌ಗಳಲ್ಲಿ ಸೆರೆ ಹಿಡಿದಿದ್ದಾರೆ.

# ಹಿಂದೂಗಳನ್ನು ಬಿಜೆಪಿಯವರೇನು ಗುತ್ತಿಗೆ ಪಡೆದಿಲ್ಲ: ಸಚಿವ ಸಂತೋಷ್ ಲಾಡ್

**ದಾವಣಗೆರೆ,ಏ.6-**ಹಿಂದೂಗಳನ್ನು ಬಿಜೆಪಿಯವರು ಗುತ್ತಿಗೆ ಪಡೆದಿಲ್ಲ್. ದೇಶದಲ್ಲಿ 20 ಲಕ್ಷ ದೇವಸ್ಥಾನಗಳು, ಈ ದೇವಸ್ಥಾನಗಳನ್ನು ಬಿಜೆಪಿಯವರು ಕಟ್ಟಿಲ್ಲ. ನಾನು ಕೂಡಾ ಹಿಂದೂ, ನಾವು, ನಮ್ಮ ತಾತ, ನಮ್ಮ ಮುತ್ತಾತನವರು ದೇವಾಲಯ ಕಟ್ಟಿಸಿದ್ದಾರೆ ಎಂದು ಕಾರ್ಮಿಕ ಇಲಾಖೆಯ ಸಚಿವ ಸಂತೋಷ್ ಲಾಡ್ ಬಿಜೆಪಿ ವಿರುದ್ಧ ವಾಗ್ದಾಳಿ ನಡೆಸಿದರು.

ದಾವಣಗೆರ್ನೆಗರ ಬೂದಿಹಾಳ್ ರಸ್ತೆಯಲ್ಲಿ ಇರುವ ತಾಜ್ ಪ್ಯಾಲೇಸ್ ಸಭಾಂಗಣದಲ್ಲಿ ನಡೆದ ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದ ಪ್ರಚಾರ ಸಭೆ ಬಳಿಕ ಮಾತನಾಡಿ, ಗ್ಯಾರೆಂಟಿ ಹಾಗೂ ಹಾಗೂ ವೃದ್ಧಾಪ್ಯ ವೇತನ ಸೇರಿ ಪ್ರತಿ ಮನೆಗೆ ಏಳರಿಂದ ಎಂಟು ಸಾವಿರ ರೂಪಾಯಿ ಬರುತ್ತಿದೆ.್ ಬಿಜೆಪಿಯವರಿಗೆ ಚುನಾವಣೆಯಲ್ಲಿ ಮುಸ್ಲಿಂ ಸಮಾಜದವರನ್ನು ಬೈಯ್ಯುವುದನ್ನು ಬಿಟ್ಟು ಬೇರೆ ವಿಚಾರ ಇಲ್ಲ. ಯಾವುದೇ ಯೋಜನೆಗಳು ಅವರ ಬಳಿ ಇಲ್ಲ ಎಂದರು.

ಸಿದ್ದರಾಮಯ್ಯ ಅವರಂತಹ ಹಿರಿಯ ನಾಯಕನ ಬಗ್ಗೆ ಕುಮಾರಸ್ವಾಮಿ ಅವರು ಆ ರೀತಿ ಶಬ್ದ ಬಳಕೆ ಮಾಡಿದ್ದು ಸರಿಯಲ್ಲ್. ಈಗ ನಾನೇನು ಹೇಳುವ ಸ್ಥಿತಿಯಲ್ಲಿ ಇಲ್ಲ. ನಾವು ರಾಜಕೀಯದಲ್ಲಿ ಶಾಶ್ವತವಾಗಿ ಇರಲ್ಲ. ಪದಬಳಕೆ ಈ ಮಟ್ಟಕ್ಕೆ ಹೋದ್ರೆ ಏನು ಗತಿ? ಒಂದೇ ಒಂದು ಸುದ್ದಿಗೋಷ್ಠಿ ಮಾಡದ ಪ್ರಧಾನ್ ನರೇಂದ್ರ ಮೋದಿ ಈಗ ಸಾಮಾಜಿಕ್ ಜಾಲತಾಣ ಮೇಲೂ ನಿರ್ಬಂಧ ಹಾಕಲು ಹೊರಟಿದ್ದಾರ್. ಬಿಜೆಪಿಯವರು ನಮ್ಮನ್ನು ಪ್ರಶ್ನೆ ಮಾಡುತ್ತಿದ್ದಾರೆ.್ ಆದ್ರೆ ಅವರು ಅಧಿಕಾರದಲ್ಲಿ ಇದ್ದಾರೆ. ಏನು ಮಾಡಿದ್ದಾರೆ ಎಂಬುದಕ್ಕೆ ಉತ್ತರಿಸಬೇಕು ಎಂದು ಆಗ್ರಹಿಸಿದರು.

ಹಣ ಕೊಡುತ್ತೇನೆ ಎಂದರೂ ಸಿಲಿಂಡರ್ ಸಿಗಿ್ಲ್ಲ- ಲಕ್ಷ್ಮೀ ಹೆಬ್ಬಾಳ್ಕರ್: ನಮ್ಮ ಅಧಿಕಾರಾವಧಿಯಲ್ಲಿ 400 ರೂಪಾಯಿಗೆ ಸಿಲಿಂಡರ್ ಸಿಗುತ್ತಿತ್ತು. ಇದೀಗ ಕೊಡ್ತೀವಿ ಎಂದರೂ ಈ ಕೇಂದ್ರದ ಅವಧಿಯಲ್ಲಿ ಸಿಲಿಂಡರ್ ಸಿಗುತ್ತಿಲ್ಲ. ಕೊರೊನಾ ಬಳಿಕ ಬೆಲೆ ಏರಿಕೆ ಆಗಿದೆ. ಇಲ್ಲಿ ಭೀಮವ್ವಗೂ ಎರಡು ಸಾವಿರ, ಸಫೂರಬೀಗೂ ಎರಡು ಸಾವಿರ, ಒಬ್ಬೊಬ್ಬರಿಗೆ ಇಲ್ಲಿತನಕ ಒಟ್ಟು 58 ಸಾವಿರ ಹಣ ಅವರ ಖಾತೆಗೆ ಹಾಕಿದ್ದೇವೆ. ಮಹಿಳೆಯರಿಗೆ ಆರ್ಥಿಕವಾಗಿ ಅನುಕೂಲ ಮಾಡಿದ್ದೇವೆ. ಬಿಜೆಪಿ ಇಂತಹ ಯೋಜನೆಗಳನ್ನು ಮಾಡಿಲ್ಲ, ಮುಂದೆ ಮಾಡುವುದಿಲ್ಲ. ಬದಲಾಗಿ ಹಿಂದೂ-ಮುಸ್ಲಿಂ ಜಗಳ ಹಚ್ಚುವ ಕೆಲಸ ಮಾಡುತ್ತಿದೆ. ಈ ಭಾಗದಲ್ಲಿ ಶಾಮನೂರು ಶಿವಶಂಕರಪ್ಪ ಅವರು ಸಾಕಷ್ಟು ಅಭಿವೃದ್ಧಿ ಕೆಲಸಗಳನ್ನು ಮಾಡಿದ್ದಾರೆ. ಸಹಾಯಕ್ಕಾಗಿ ಅವರ ಮನೆಗೆ ತೆರಳಿದ್ರೆ ಸಹಾಯದ ಹಸ್ತ ಚಾಚುತ್ತಿದ್ದರು. ನಿಮ್ಮ ಸರ್ಕಾರ ಈ ಕಾಂಗ್ರೆಸ್ ಸರ್ಕಾರ. ನೀವು ಅಂದುಕೊಂಡಂತೆ ನಡೆಯುವ ಸರ್ಕಾರ, ಬಿಜೆಪಿಗೆ ಮತ ಹಾಕಿದ್ರೆ ನಿಮ್ಮ ಮತ ವ್ಯರ್ಥ ಆಗಲಿದೆ. ಬರುವ ಬಿಜೆಪಿ ಶಾಸಕ ಏನು ಕೆಲಸ ಮಾಡಲು ಆಗುವುದಿಲ್ಲ. ಸಮರ್ಥ್ ಶಾಮನೂರು ಅವರು 27 ವರ್ಷದ ಯುವಕ. ಇನ್ನು ಮೂರು ದಿನ ಬಾಕಿ ಉಳಿದಿದೆ. ಮತಗಟ್ಟೆಗೆ ತೆರಳಿ ಕಾಂಗ್ರೆಸ್‌ಗೆ ಮತದಾನ ಮಾಡಿ ಎಂದು ಹೇಳಿದರು.

# ಹಿಂದಿ ಭಾಷೆಗೆ ರಾಜ್ಯಪಾಲರ ಒತ್ತು ವಿರೋಧಿಸಿ ಕರ್ನಾಟಕ ರಕ್ಷಣಾ ವೇದಿಕೆ ಪ್ರತಿಭಟನೆ

ರಾಜ್ಯಪಾಲರು ತಮ್ಮ ಸಂವಿಧಾನಬದ್ಧ ಕಾರ್ಯವ್ಯಾಪ್ತಿಯನ್ನು ಮೀರಿ ಕನ್ನಡಿಗರ ಆಶೋತ್ತರಗಳಿಗೆ ವಿರುದ್ಧವಾಗಿ ನಡೆದುಕೊಂಡಿದ್ದಾರೆ. ಹೀಗಾಗಿ ಅವರು ರಾಜ್ಯಪಾಲರ ಹುದ್ದೆಯಲ್ಲಿ ಮುಂದುವರೆಯುವ ನೈತಿಕ ಹಕ್ಕನ್ನು ಕಳೆದುಕೊಂಡಿದ್ದಾರೆ ಎಂದು ಹೇಳಿದರು.

ರಾಜ್ಯಪಾಲರು ರಾಜ್ಯದ ದಿನನಿತ್ಯದ ಆಡಳಿತದಲ್ಲಿ ಹಸ್ತಕ್ಷೇಪ ಮಾಡುವುದು ಜನಪ್ರತಿನಿಧಿಗಳ ಸರ್ಕಾರದ ಕಾರ್ಯಪಟುವಿಗೆ ವಿರುದ್ಧವಾಗಿದೆ. ಕರ್ನಾಟಕದ ಜನತೆ ಆಯ್ಕೆ ಮಾಡಿದ ಸರ್ಕಾರವೇ ರಾಜ್ಯದ ನೀತಿಗಳನ್ನು ತೀರ್ಮಾನಿಸುತ್ತದೆ. ಅಂತಹ ನಿರ್ಧಾರಗಳನ್ನು ಬೆಂಬಲಿಸುವುದು ರಾಜ್ಯಪಾಲರ ಕರ್ತವ್ಯವಾಗಿರುತ್ತದೆ. ಆದರೆ ಅವರ ಇತ್ತೀಚಿನ ನಡೆ ಹಿಂದಿ ಪರ ಧೋರಣೆಯನ್ನು ತೋರಿಸುತ್ತದೆ ಎಂಬ ಭಾವನೆ ಉಂಟಾಗಿದೆ ಎಂದು ಅಭಿಪ್ರಾಯಪಟ್ಟರು.

ಬೆಂಗಳೂರು ಸ್ಥಳೀಯ ಭಾಷೆಗಳ ಸಂರಕ್ಷಣಾ ಸಂಘ ಎಂಬ ಅನಾಮಧೇಯ ಸಂಘಟನೆಯ ಮನವಿಗೆ ತುರ್ತಾಗಿ ಪ್ರತಿಕ್ರಿಯಿಸಿ ರಾಜ್ಯ ಸರ್ಕಾರಕ್ಕೆ ಪತ್ರ ಬರೆದಿರುವುದು ಗಂಭೀರ ಅನುಮಾನಕ್ಕೆ ಕಾರಣವಾಗಿದೆ ಎಂದು ಹೇಳಿದರು.

ಕರ್ನಾಟಕವನ್ನು ಹಿಂದಿ ಭಾಷಿಕರಿಗಾಗಿ ಸುರಕ್ಷಿತ ಸ್ಥಳವನ್ನಾಗಿಸುವ ದೂರಗಾಮಿ ಉದ್ದೇಶಗಳು ಇದರಲ್ಲಿ ಅಡಕವಾಗಿವೆ ಎಂಬ ಅನುಮಾನ ವ್ಯಕ್ತವಾಗುತ್ತಿದೆ.

ಕರ್ನಾಟಕದ ಶಿಕ್ಷಣ ನೀತಿಯನ್ನು ರಾಜ್ಯ ಸರ್ಕಾರವೇ ನಿರ್ಧರಿಸುವುದು ಸಂವಿಧಾನಬದ್ಧ ವ್ಯವಸ್ಥೆಯಾಗಿದೆ. ಈ ವಿಷಯದಲ್ಲಿ ರಾಜ್ಯಪಾಲರ ಹಸ್ತಕ್ಷೇಪ ಅಸಂಗತವಾಗಿದೆ ಎಂದು ತಿಳಿಸಿದರು.

ರಾಜ್ಯ ಸರ್ಕಾರ ಈ ಪತ್ರವನ್ನು ಪರಿಗಣಿಸಬಾರದು ಎಂದು ಒತ್ತಾಯಿಸಿ, ಕನ್ನಡಿಗರ ಹಿತದೃಷ್ಟಿಗೆ ವಿರುದ್ಧವಾದ ಯಾವುದೇ ಕ್ರಮವನ್ನು ತೀವ್ರವಾಗಿ ವಿರೋಧಿಸುವುದಾಗಿ ತಿಳಿಸಿದರು. ಜೊತೆಗೆ ರಾಜ್ಯಪಾಲರನ್ನು ಕೂಡಲೇ ಹಿಂತೆಗೆದುಕೊಳ್ಳುವಂತೆ ಕೇಂದ್ರ ಸರ್ಕಾರವನ್ನು ಮನವಿ ಮಾಡಿದರು.

ಈ ಸಂದರ್ಭದಲ್ಲಿ ವೇದಿಕೆ ಜಿಲ್ಲಾಧ್ಯಕ್ಷ ವಿನೋದರೆಡ್ಡಿ ಸೇರಿದಂತೆ ಪದಾಧಿಕಾರಿಗಳು ಉಪಸ್ಥಿತರಿದ್ದರು.

## ಜಿಲ್ಲೆಯಲ್ಲಿ ಇಸ್ಪೀಟ್ ,ಮಟ್ಕಾಜೂಜಾ ತಡೆಯಲು ಕ್ರಮ-ಎಸ್‌ಪಿ

ಅಕ್ರಮ ಮರಳು ಗಣಿಗಾರಿಕೆ 207, ಅಬಕಾರಿ 121, ಎನ್‌ಡಿಪಿಎಸ್ ಗಾಂಜಾದ 71 ಪ್ರಕರಣಗಳನ್ನು ದಾಖಲಿಸಿಲಾಗಿದೆ ಎಂದು ಮಾಹಿತಿ ನೀಡಿದ್ದಾರೆ.

ಅಬಕಾರಿ ಇಲಾಖೆಯಿಂದ 121 ಪ್ರಕರಣಗಳಲ್ಲಿ 23 ಪ್ರಕರಣಗಲು ಅಕ್ರಮ ಸೇಂದಿ ಮಾರಾಟದ್ದಾಗಿದ್ದು, 23 ಪ್ರಕರಣಗಳಲ್ಲಿ 832 ಲೀಟರ್ ಸೇಂದಿಯನ್ನು ವಶಪಡಿಸಿಕೊಳ್ಳಲಾಗಿದ್ದು, ಇದಲ್ಲದೇ 71 ಗಾಂಜಾ ಪ್ರಕರಣಗಳಲ್ಲಿ 8 ಪ್ರಕರಣಗಳಲ್ಲಿ 11 ಜನ ಆರೋಪಿ ಗಳನ್ನು ಬಂಧಿಸಲಾಗಿದ್ದು, ಅವರಿಂದ 4.35 ಕೆ.ಜಿ ಗಾಂಜಾವನ್ನು ಜಪ್ತಿ ಪಡಿಸಿಕೊಳ್ಳಲಾಗಿದೆ ಎಂದಿದ್ದಾರೆ.

## ಎಲ್‌ಐಸಿ ಕಚೇರಿಯಲ್ಲಿ ನೀರಿನ ಅರವಟ್ಟಿಗೆ ಪ್ರಾರಂಭ

ಸಂಘದ ಅಧ್ಯಕ್ಷ ಎಂ.ಶರಣಗೌಡ, ಪ್ರದಾನ ಕಾರ್ಯದರ್ಶಿ ಎಂ.ರವಿಗೆ ಮಾರುಕಟ್ಟೆ ಪ್ರಬಂಧಕ ಎ.ಚಿರಜೀವಿ, ಮಾನವ ಸಂಪನ್ಮೂಲ ಪ್ರಬಂಧಕ ಸಿ.ಹೆಚ್.ವಂಶೀನಾಥ, ಕಛೇರಿ ನಿರ್ವಾಹಕ ಪ್ರಬಂಧಕ ಮನೀಷ್.ಝಾ, ಸಂಘದ ಪದಾಧಿಕಾರಿಗಳಾದ ವಿ.ಹೆಚ್. ರಾಘವೇಂದ್ರ, ಶ್ರೀಶೈಲ, ವೀರೇಶ, ಕೃಷ್ಣಮೂರ್ತಿ, ವೆಂಕಟೇಶ, ಸಂತೋಷಕುಮಾರ, ನಾಗರಾಜ ಹಾಗೂ ವಿಭಾಗಿಯಯ ಮತ್ತು ಶಾಖಾ ಕಛೇರಿಗಳ ಸಿಬ್ಬಂದಿ ಉಪಸ್ಥಿತರಿದ್ದರು.

## ಏ.7ರಂದು ಶಾಂತರಸ ನೆನಪು ಕಾಯಕ್ರಮ ಉಪನ್ಯಾಸ, ಗಜಲ್ ವಾಚನ- ರಂಗಸ್ವಾಮಿ

ವೆಂಕಟೇಶ ಬೇವಿನಬೆಂಚಿ ಆಗಮಿಸಲಿದ್ದಾರೆ. ಮಹಾದೇವ ಪಾಟೀಲ್, ಯಲ್ಲಪ್ಪ ಮರ್ಚಡ್, ಮಲ್ಲೇಶಬೈರವ್, ಅಭಿಷೇಕ ಬಳೆ ಮಸರಕಲ್, ಶಂಕುಸುತ ಮಹಾದೇವ, ನರಸಿಂಹಲು ವಡವಾಟಿ, ಪೃಥ್ವಿರಾಜ್ ಇವರು ಗಜಲ್ ವಾಚನ ಮಾಡಲಿದ್ದಾರೆ ಎಂದರು. ಈ ಸಂದರ್ಭದಲ್ಲಿ ರಂಗಪ್ಪ, ಚಂದ್ರಶೇಖರ ಏಗನೂರು ಉಪಸ್ಥಿತರಿದ್ದರು.

OWNER, PUBLISHER, PRINTER BY: SHYAM SUNDER L. PUBLISHED FROM: H: NO: 5-3-6, HANUMAN TALKIES ROAD, OPP VAIKUNTAM TEMPLE, NETAJI NAGAR, RAICHUR-584101, DIST: RAICHUR, KARNATAKA AND PRINTED AT: KANNADA MATHRUBHOOMI PRINTERS, SHOP NO: 5-3-6, HANUMAN TALKIES ROAD, OPP VAIKUNTAM TEMPLE, NETAJI NAGAR, RAICHUR-584101, DIST: RAICHUR, KARNATAKA, EDITOR BY: SHYAM SUNDER L